(೩) ಗಮನ ಸೆಳೆಯುವ ಸೂಚನೆ

ಕೆ.ಎಂ.ಎಫ್.ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ (ಮುಂದು)

+ ಶ್ರೀ ಕ.ಹೆಚ್.ಹನುಮೇಗೌಡ. (ಹಾಸನ): ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಮೊದಲನೆಯದಾಗಿ ಧನ್ಯವಾದಗಳು. ಆದರೆ ಸ್ವಲ್ಪ ಹೆಚ್ಚು ಸಮಯವನ್ನು ನಾನು ಮಾತನಾಡಲು ತೆಗೆದುಕೊಳ್ಳುತ್ತೇನೆ. ಭೋಜನಕ್ಕೆ ತಾವು ಸದನವನ್ನು ಮುಂದೂಡುವ ಮುಂಚೆ ಕೆಲವು ಸದಸ್ಯರುಗಳು ಮಾತನಾಡಿದ್ದನ್ನು ನಾನು ಮೌನವಾಗಿ ಕುಳಿತು ಕೇಳಿಸಿಕೊಂಡಿದ್ದೇನೆ. ಆದುದರಿಂದ, ಸ್ವಲ್ಪ ವಿವರವಾಗಿ ಮಾತನಾಡಲು ನನಗೆ ಹೆಚ್ಚು ಸಮಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದೇವರಿಗೆ ಸಮಾನರಾದ ದೈವ ಸಂಭೂತರೊಬ್ಬರನ್ನು ಒಬ್ಬ ಶಿಷ್ಯ ಭೇಟಿ ಮಾಡಿ ಪ್ರಶ್ನೆ ಮಾಡುತ್ತಾ ''ತಿಳಿದು ತಿಳಿದು ತಪ್ಪು ಮಾಡಿದರೆ ಏನು ಶಿಕ್ಷೆ ಮತ್ತು ತಿಳಿಯದೇ ತಪ್ಪು ಮಾಡಿದರೆ ಏನು ಶಿಕ್ಷೆ ಎಂದು ಕೇಳಿದನಂತೆ '' ಆಗ ಆ ದೈವ ಸಂಭೂತರು ಏನು ಹೇಳಿದರೆಂದರೆ ''ತಿಳಿದು ತಿಳಿದು ತಪ್ಪು ಮಾಡುವ ಶಿಕ್ಷೆಗೆ ಕ್ಷಮಾಪಣೆ ಇಲ್ಲ, ಅದು ಘೋರ ಅಪರಾಧ ಶಿಕ್ಷೆ'' ಆಗಲೇಬೇಕು. ಆದರೆ ತಿಳಿಯದೇ ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಇಲ್ಲ ಎಂದು ಹೇಳಿದರಂತೆ. ನಾನು ಏಕೆ ಈ ಮಾತನ್ನು ಹೇಳಿದೆನೆಂದರೆ ನಡೆದಿರತಕ್ಕಂಥ ಸಂಗತಿಗಳು ಗೊತ್ತಿದ್ದು ಗೊತ್ತಿದ್ದು ಬಹಳ ಹೋರಾಟದಲ್ಲಿ ಇದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋದರಲ್ಲಾ ಎನ್ನುವ ಸಂಕಟದಿಂದ, ನೋವಿನಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ ಅಲ್ಲಿ ತಕ್ಕಡಿಯನ್ನು ಬೇರೆ ನೇತುಹಾಕಿದ್ದೀರಿ. ಈ ಪಾಪದಿಂದ ಯಾರಿಗೂ ಬಿಡುಗಡೆ ಇಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಐ ಡೊಂಟ್ ವಾಂಟ್ ಸೈಡ್ ಕಾಮೆಂಟ್ಸ್. ನನಗೆ ಹೇಳಲು ಅಧಿಕಾರ ಇದೆ. ಜನ ನನಗೆ ಓಟು ಕೊಟ್ಟಿದ್ದಾರೆ. ಈ ದೇಶದ ರೈತರ ಸುಲಿಗೆಯಾಗುತ್ತಿದೆ. ಆ ಸಂಸ್ಥೆಯಲ್ಲಿ ದರೋಡೆಯಾಗುತ್ತಿದೆ. ಅದನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಈ ಸದನದಲ್ಲಿ ಕುಳಿತಿರುವವರಲ್ಲಿ ಶೇಕಡ 80ರಷ್ಟು ಸದಸ್ಯರುಗಳು ಒಂದಲ್ಲ ಒಂದು ಏಧದಲ್ಲಿ ರೈತರ ಮನೆಗಳಿಂದಲೇ ಬಂದಿರುವವರು ಮತ್ತು ರೈತರ ಮತಗಳನ್ನು ಪಡೆದುಕೊಂಡೇ ಇಲ್ಲಿಗೆ ಬಂದಿರುವವರಾಗಿದ್ದಾರೆ. ರೈತರುಗಳು ಓಟು ಕೊಡುವಾಗಲೂ ಕೂಡ ಮೇಲೆ ಇರುವವರಿಗೆ ಸಪೋರ್ಟ್ ಮಾಡಿಕೊಂಡು ಮಾಡಬಾರದ್ದನ್ನು ಮಾಡಿ ಕೆಟ್ಟ ಹೆಸರು ತರಬೇಡ ಎಂದು ಕೆಲವರು ನನಗೆ ಹೇಳಿದ್ದಾರೆ? ಬೇರೆಯವರಿಗೂ ಹೇಳಿರಬಹುದು ಒಟ್ಟಿದಲ್ಲಿ ನ್ಯಾಯವಾದ ವಿಚಾರಕ್ಕೆ ಹೋರಾಟ ಮಾಡಬೇಕು. ಅನ್ಯಾಯದ ವಿರುದ್ಧವಾಗಿ ಹೋರಾಟ ಮಾಡಿ ಸರಿಪಡಿಸಬೇಕಾದ್ದು ನಮ್ಮ ಧರ್ಮವಾಗಿದೆ. ಆ ಕೆಲಸವನ್ನು ನಾನು ಇಂದು ಮಾಡುತ್ತಿದ್ದೇನೆ. ಎನ್‌ಕ್ವೈರಿ-ಎನ್‌ಕ್ವೈರಿ ಎಂದು ಎರಡು ಮೂರು ಜನ ಹೇಳಿದರು. ಎನ್‌ಕ್ವೈರಿ ಯಾವತ್ತಿನಿಂದ ಎಲ್ಲಿಯವರೆಗಾದರೂ ಮಾಡಿಸಿ, ಯಾವ ಸಂಸ್ಥೆಯಾದರೂ ಮಾಡಲಿ. ಯಾರೇ ತಪ್ಪು ಮಾಡಿದ್ದರೂ ಅವರನ್ನು ನೇಣು ಹಾಕಿ. ಅದರ ಬಗ್ಗೆ

ನನ್ನದೇನೂ ಎರಡನೇ ಮಾತೇ ಇಲ್ಲ. ನನಗೆ ತಿಳಿದ ಮಟ್ಟಿಗೆ ಭ್ರಷ್ಟಾಚಾರದ ಪಿಡುಗು ಕೆ.ಎಂ.ಎಫ್. ಹಾಗೂ ಡೈರಿ ಯೂನಿಯನ್‌ಗಳಿಗೆ 1996ರಿಂದ ಪ್ರಾರಂಭವಾಗಿದೆ. ಅದರಿಂದ ಹಿಂದೆ ನನಗೆ ತಿಳಿದ ಮಟ್ಟಿಗೆ ಅಂತಹ ಅನ್ಯಾಯ ಆಗಿರಲಿಲ್ಲ. ಅದಕ್ಕೂ ಹಿಂದೆ ನಡೆದಿದ್ದರೆ ಅದರ ಬಗ್ಗೆಯೂ ಕೂಡ ಎನ್‌ಕ್ವೈರಿ ನಡೆಸಲಿ. ಯಾರು ತಪ್ಪು ಮಾಡಿದ್ದಾರೋ ಅವರಿಗೆ ಕಠಿಣವಾದ ಶಿಕ್ಷೆ ಕೊಡಲಿ. ನಾನೂ ಕೂಡ ಅದಕ್ಕೆ ಒಪ್ಪಿಕೊಳ್ಳುತ್ತೇನೆ. ನಾನು ಕಳೆದ ವರ್ಷ ಹಾಸನ ಡೈರಿ ಬಗ್ಗೆ ಕೆಲವು ಛಾರ್ಜಸ್ ಮಾಡಿ ಹೇಳಿದಾಗ ಮಾನ್ಯ ಮಂತ್ರಿಗಳು ನಿಯಮ 64ರ ಮೇರೆಗೆ ಎನ್‌ಕ್ವೈರಿ ಮಾಡಿಸುತ್ತೇನೆ ಎಂದರು ನಿಯಮ 64ರ ರೀತಿಯಲ್ಲಿ ಎನ್‌ಕ್ವೈರಿ ಮಾಡುವುದಕ್ಕೆ ಹೋದವರು ಅವರ ಇಲಾಖೆಯ ಒಬ್ಬ ಅಧಿಕಾರಿಯೇ ಆಗಿದ್ದರು. ಇಲಾಖೆಯ ಜಾಯಿಂಟ್ ರಿಜಿಸ್ಟ್ರಾರ್‌ರವರೇ ಎನ್‌ಕ್ವೈರಿ ಮಾಡಿ ಈ ಶಾಸನ ಸಭೆಯಲ್ಲಿ ನಾನು ಮತ್ತು ಕೆಲವರು ಹೇಳಿದ್ದೆವಲ್ಲಾ, ಈ ಆಕ್ಷನ್ ಛಾರ್ಜಸ್ ಎಲ್ಲಾ ತೆಗೆದುಕೊಳ್ಳಿ ಎಂದು ವರದಿ ಕೊಟ್ಟರು. ನಾನು ಈಗ ಕೇಳುವುದೇನೆಂದರೆ ಆ ವರದಿಕೊಟ್ಟು ನಾಲ್ಕು ತಿಂಗಳಾಗಿದ್ದರೂ ಕೂಡ ಇನ್ನೂ ಏಕೆ ಸರ್ಕಾರ ಆ್ಯಕ್ಷನ್ ತೆಗೆದುಕೊಂಡಿಲ್ಲ. ಆಕ್ಷನ್ ತೆಗೆದುಕೊಂಡು ಈ ರೈತರ ಸಂಸ್ಥೆ ಉಳಿಯಲಿ ಎಂದು ಮಾಡಿದ್ದರೆ ಈವತ್ತು ಇಷ್ಟು ಜನ ಏತಕ್ಕೆ ಕೂಗಾಡಬೇಕಾಗಿತ್ತು? ನಿಜ ಎಂದು ಒಪ್ಪಿಕೊಂಡ ಮೇಲೆ ಅದಕ್ಕೆ ಸಂಬಂಧಪಟ್ಟಂತೆ ಅದರ ಅಧ್ಯಕ್ಷರಿಗೆ ನೋಟಿಸ್ ಕೊಡುವುದಕ್ಕೆ ನಾಲ್ಕು ತಿಂಗಳು ಬೇಕೇ? ನಾಚಿಕೆಯಾಗುವುದಿಲ್ಲವೆ? ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ? ಅವರು ಹೋಗುವ ಕಡೆಯಲ್ಲೆಲ್ಲಾ ಜೆಡ್ ಕ್ಯಾಟಗರಿ ಸೆಕ್ಯೂರಿಟ ಕೂಡ ಜೊತೆಯಲ್ಲಿಯೇ ಹೋಗಬೇಕಲ್ಲದೆ ಪ್ರತಿ ಗಂಟೆಗೆ ಎಸ್.ಪಿ.ಗೆ ರಿಪೋರ್ಟ್ ಮಾಡಬೇಕು. ಇಂತಹ ಕಡೆ ಹೋಗುತ್ತಿದ್ದಾರೆ ಎಂಬ ಬಗ್ಗೆಯೆಲ್ಲಾ ರಿಪೋರ್ಟ್ ಮಾಡುವ ವ್ಯವಸ್ಥೆ ಇರುವಾಗ ನಿಮ್ಮ ಇಲಾಖೆಯ ಅಧಿಕಾರಿ ಇಂತಹ ಕಡೆ ಇದ್ದಾರೆ ಎಂಬುದನ್ನು ತಿಳಿದುಕೊಂಡು ನೋಟೀಸ್ ಜಾರಿ ಮಾಡುವುದಕ್ಕೆ ಯೋಗ್ಯತೆ ಇಲ್ಲದಿದ್ದ ಮೇಲೆ ಅಂಥ ಅಧಿಕಾರಿಗಳನ್ನು ನೀವು ಏಕೆ ಇಟ್ಟುಕೊಳ್ಳಬೇಕು? ಅವರು ರೈತರ ಪರವಾಗಿದ್ದಾರೆಯೋ ಅಥವಾ ಈ ಭ್ರಷ್ಟರನ್ನು ಸೇಫ್ ಮಾಡುವುದಕ್ಕೋಸ್ಕರ ಇದ್ದಾರೋ? ನೋಟಸ್ ಕೊಡುವುದಕ್ಕೆ ಮಂತ್ರಿ ಬೇಕೆ? ಇಂದು ಎಷ್ಟು ಸೊಸೈಟಿಗಳು ಹಾಳಾಗಿ ಹೋಗಿವೆ, ಇದರಿಂದಾಗಿ ಬಹಳಷ್ಟು ರೈತರುಗಳು ಮುಳುಗಿ ಹೋಗಿದ್ದಾರೆ, ಕಬ್ಬು ಪೂರೈಕೆ ಮಾಡಿದ ರೈತರುಗಳಿಗೆ 99 ಕೋಟಿ ರೂಪಾಯಿಗಳನ್ನು ಇನ್ನೂ ಕೊಟ್ಟಿಲ್ಲ, ಹುಟ್ಟು ಸಹಕಾರಿಗಳ ಕೈಲಿದೆ, ಮುಟ್ಟಬೇಡಿ ಎನ್ನುತ್ತಾರೆ, ಹೀಗೆಂದರೆ ಎಂಥ ರೇಗು ಸಿಟ್ಟು ಬರುತ್ತದೆ ಗೊತ್ತೇ? ಹುಟ್ಟು ಸಹಕಾರಿಗಳ ಕೈಗೆ ಕೊಟ್ಟು ದೇಶ ರೈತನ ಕೊಳ್ಳೆ ಹೊಡೆಸುತ್ತಿದ್ದೀರಾ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನಾಳೆ ಮುಗಿಯುವುದರೊಳಗೆ ನಿಮ್ಮ ಅಧಿಕಾರಿಗಳಿಗೆ ಡೈರಕ್ಷನ್ಸ್ ಕೊಟ್ಟು ಆ ನೋಟಿಸ್‌ನ್ನು ಸರ್ವ್ ಮಾಡಿಸಿ ನಮಗೆ ಆ ಏಚಾರವನ್ನು ಹೇಳಬೇಕು. ಹಾಗಿದ್ದರೆ ಮಾತ್ರ ನೀವು ಮಂತ್ರಿ ಪದವಿಯಲ್ಲಿರುವುದಕ್ಕೆ ಲಾಯಕ್ಕು, ಇಲ್ಲದಿದ್ದರೆ ಇಲ್ಲ ಎಂಬುದನ್ನು ನಾನು ವಿಧಿಯಿಲ್ಲದೆ ನಾನು ಇಲ್ಲಿ ಹೇಳಬೇಕಾಗಿದೆ. ಅಧಿಕಾರಿಗಳು ಹೇಳಿದ ತಾಳಕ್ಕೆ ತಕ್ಕಂತೆ ನೀವು ಕುಣಿಯಬೇಡಿ. ಈ

ಅಧಿಕಾರಿಗಳು ಇವ್ಹೊತ್ತು ಇರುತ್ತಾರೆ, ನಾಳೆ ಹೋಗುತ್ತಾರೆ. ನಿಮಗೆ ಓಟು ಕೊಟ್ಟರುವವರು ಬಡ ರೈತರುಗಳು, ಮುಗ್ಧ ಜನ. ಇಂಥ ಜನರ ಕೊಳ್ಳೆ ಹೊಡೆಯುತ್ತಿದ್ದರೆ, ಸುಲಿಗೆಯಾಗುತ್ತಿದ್ದರೆ, ರೈತರ ಸಂಸ್ಥೆ ಹಾಳಾಗಿ ಹೋಗುತ್ತಿದ್ದರೆ ನಾವೆಲ್ಲರೂ ಸುಮ್ಮನೇ ಕುಳಿತುಕೊಳ್ಳಬೇಕೆ?

ಶ್ರೀ ಕೆ.ಶ್ರೀನಿವಾಸ ಗೌಡ(ಕುದುವನಹಳ್ಳಿ): ಹುಟ್ಟುವಾಗ ಯಾರೂ ಕೂಡ ಹೀಗೆ ಸಹಕಾರಿಗಳಾಗುತ್ತೇವೆ ಎಂದು ತಿಳಿದು ಕೊಂಡಿರುವುದಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್.ಹನುಮೇಗೌಡ: ಆಟಂಬಾಂಬ್ ಅನ್ನು ಅವರಿಗೆ ಕಟ್ಟಿದರೆ ಆಟಂಬಾಂಬೇ ನೆಗೆದು ಬಿದ್ದು ಹೋಗುತ್ತದೆ. ನೀವು ಸುಮ್ಮನಿರಿ. ನಾನು ಮಾತು ಮುಗಿಸುತ್ತೇನೆ. ನನಗೆ ಹೇಳುವುದಕ್ಕೆ ಅಧಿಕಾರ ಇದೆ. ನ್ಯಾಯವಾಗಿರುವುದನ್ನು ಹೇಳುತ್ತೇನೆ. ನಾನು ಯಾರಿಗೂ ಭಯಪಡುವುದಿಲ್ಲ. ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಇವರು ಹುಟ್ಟು ಸಹಕಾರಿಗಳು! ಹುಟ್ಟು ಸಹಕಾರಿಗಳು ಎಂದರೆ ನನ್ನ ಅಭಿಪ್ರಾಯದಲ್ಲಿ ತಾಯಿಯ ಹೊಟ್ಟೆಯಲ್ಲಿ ಇರುತ್ತಾರಲ್ಲಾ ಆಗಿನಿಂದಲೇ ಮೇಯ್ದುಕೊಂಡು ಬಂದಿರುತ್ತಾರೆ. ಈಚೆಗೆ ಬಂದು ಇವರು ಈಗಲೂ ಮೇಯ್ದಿದ್ದೇ ಮೇಯ್ದದ್ದು. ಅವರು ಹುಟ್ಟು ಸಹಕಾರಿಗಳು! ಅವರು ಯಾರ ಕೈಗೂ ಸಿಗುವುದಿಲ್ಲ. ಸಿಕ್ಕಿದರೂ ಏನೂ ಆಗುವುದಿಲ್ಲ. ಯಾರ್ಯಾರನ್ನಾದರೂ ಇವರು ಹಿಡಿಯುತ್ತಾರೆ, ಏನಾದರೂ ಮಾಡುತ್ತಾರೆ. ಸಾವಿರಾರು ಕೋಟ ರೂಪಾಯಿ ಮಿಸ್ ಅಪ್ರೊಪ್ರಿಯೇಷನ್ ಆಗಿರುವುದು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನಲ್ಲಿ. ಮಾನ್ಯ ಮಂತ್ರಿಗಳು ಹೇಳಲಿ ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದಾರೆ? ಎಷ್ಟು ದುಡ್ಡು ರಿಕವರಿಯಾಯಿತು? ಪಾಪದವರ ಮನೆ ಹಾಳಾಗಿ ಹೋಗುತ್ತಿದೆಯಲ್ಲಾ, ಇವರು ಹುಟ್ಟು ಸಹಕಾರಿಗಳು. ಇವರನ್ನು ಮುಟ್ಟುವುದಕ್ಕೆ ಆಗುವುದಿಲ್ಲವಂತೆ ಮಾನ್ಯ ಸಚಿವರನ್ನು ನಾನು ನಿಮ್ಮ ಮುಖಾಂತರ ಕೇಳುತ್ತೇನೆ, 64ರ ಎನ್‌ಕ್ವೈರಿಯ ಪ್ರಕಾರ ಅಸೆಂಬ್ಲಿಯಲ್ಲಿ ಚಾರ್ಜ್ ಮಾಡಿದಂತಹ ಎಲ್ಲಾ ಚಾರ್ಜ್‌ಗಳು ಪ್ರೂವ್ ಆಗಿದೆ ಎಂದು ನನಗೆ ರಿಪ್ಲೈ ಕೊಟ್ಟರು. ಇದಾಗಿ ನಾಲ್ಕು ತಿಂಗಳಾಗಿದೆ. ಹಾಗಾದರೆ ಇವರು ಏಕೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಲಿಲ್ಲ? ಅಲ್ಲಿ ಒಬ್ಬ ಡೆಪ್ಯೂಟಿ ರಿಜಿಸ್ಟ್ರಾರ್ ಇದ್ದಾನೆ. ಇಬ್ಬರೂ ಜೊತೆಯಲ್ಲೇ ಇರುಯತ್ತಾರೆ. ಅವನೇ ಗೈಡ್. ಅವನೇ ಹೇಳಿಕೊಡುತ್ತಾನೆ.

ಶ್ರೀ ಕೆ.ಶ್ರೀನಿವಾಸ ಗೌಡ (ಕುದುವನಹಳ್ಳಿ): ತಾವು ಕೆ.ಎಂ.ಎಫ್. ಬಗ್ಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟರುವುದು. ಆದರೆ ಹಾಸನ ಡೈರಿ ಎನ್‌ಕ್ವೈರಿ ಬಗ್ಗೆ ಕೇಳುತ್ತಿದ್ದೀರಿ. ತಾವು ಕೆ.ಎಂ.ಎಫ್ ಬಗ್ಗೆ ಕಾಲಿಂಗ್ ಅಟೆನ್‌ಷನ್ ಎಂದು ಹೇಳಿದ್ದರಿ. ಮಾನ್ಯ ಉಪಾಧ್ಯಕ್ಷರೆ, ಇವರು ಯಾವುದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದಾರೆ ಅದರ ಬಗ್ಗೆ ಮಾತನಾಡಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ: ಸ್ವಾಮಿ, ಡೈರಿ ವಿಚಾರ ಪ್ರಸ್ತಾಪಕ್ಕೆ ಬಂದಿರುವುದಕ್ಕೆ ಇವನ್ನು ಮಾತನಾಡುತ್ತಿದ್ದೇನೆ. ಸಹಕಾರಿ ಕಾಯ್ದೆ ಕಲಂ 64ರ ಎನ್ ಕ್ವೈರಿ ಎಂದು ಹೇಳಿ ಭಾರಿ ಬೊಂಬಡ ಹೊಡೆಯುತ್ತಿದ್ದೀರಲ್ಲಾ, ಕಲಂ 64ರ ಎನ್‌ಕ್ವೈರಿ ಆಗಿ ನಾಲ್ಕು ತಿಂಗಳಾಗಿದೆ, ನೆಗೆದು ಬಿದ್ದು ಹೋಗಿದೆ. ಇವರಿಗೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲವಲ್ಲಾ ಎಂಬ ದೃಷ್ಟಾಂತದಲ್ಲಿ ನಾನು ಹೇಳಿದ್ದೇನೆಯೇ ಏನು ಇದನ್ನು ಬಿಟ್ಟು ಬೇರೆ ಏನೂ ಇಲ್ಲ. ಅವರಿಂದ ನಾನು ಏನೂ ಕಲಿಯಬೇಕಾಗಿಲ್ಲ. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಪದೇ ಪದೇ ಅಡಚಣೆ ಮಾಡಿದರೆ ನಾನು ಈಲ್ಡ್ ಆಗುವುದಿಲ್ಲ. ತಾವೂ ಸಹ ಅಲೋ ಮಾಡಕೂಡದು. ನಾನು ಮೇಲೆ ಕೇಳಿದಂತಹ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ನಾಳೆ ಸಾಯಂಕಾಲದೊಳಗೆ ಆ ನೋಟೀಸನ್ನು ಜಾರಿ ಮಾಡಿ ರಿಪೋರ್ಟ್ ಮಾಡಬೇಕು ಮತ್ತು ತಕ್ಷಣ ಅದರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ನಾವೇನು ಚಾರ್ಜ್ ಮಾಡಿದ್ದೇವೆ ಅದೆಲ್ಲಾ ನಡೆದಿದೆ. ಇಲ್ಲಿಗೆ ತಾಸಸ ಡೈರಿ ಬಗ್ಗೆ ಮಾತನಾಡುವುದಿಲ್ಲ. ನಿಲ್ಲಿಸಿ ಬಿಡುತ್ತೇನೆ. ಇನ್ನು ಕೆ.ಎಂ.ಎಫ್.ನಲ್ಲಿ ಕೆಲವರು ಏನು ತಿಳಿದುಕೊಂಡಿದ್ದಾರೆಂದರೆ ಪತ್ತೆ ಇಲ್ಲದ ಹಾಗೆ ಮೇಯುತ್ತಿದ್ದರೆ ಅದು ಯಾರಿಗೂ ಗೊತ್ತಾಗುವುದಿಲ್ಲ ಎಂದು. ಬೆಳ್ಳು ಕಣ್ಣು ಮುಚ್ಚಿಕೊಂಡು ಹಾಲು ಕುಡಿದುಬಿಡುತ್ತದೆ, ಯಾರೂ ನೋಡದೆ ಇರಲಿ ನಾನು ಒಬ್ಬನೇ ಕುಡಿಯುತ್ತಿದ್ದೇನೆ ಎಂದು ತಿಳಿದುಕೊಂಡು ಕುಡಿಯುವುದು. ಇವರ ಇಲಾಖೆಯಲ್ಲಿ ಎಷ್ಟು ಜನ ಏನೇನು ಅನ್ಯಾಯ ಮಾಡುತ್ತಿದ್ದಾರೆ, ಯಾರ್ಯಾರು ತಿನ್ನುತ್ತಿದ್ದಾರೆ, ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ, ಯಾರು ಯೋಗ್ಯರು ಎಂಬ ಬಗ್ಗೆ ನಮ್ಮ ಹತ್ತಿರ ಲಿಸ್ಟ್ ಇದೆ. ನಾವು ವಿರೋಧಪಕ್ಷದವರು, ನಮಗೆ ಬಂದು ಹೇಳುತ್ತಾರೆ. ಎರಡು-ಮೂರು ದಿವಸಕ್ಕೆ ಇಂತಹವನು ಇಂಥಾದ್ದನ್ನು ಇಷ್ಟು ಮೇಯ್ದ, ಇಂತಹವನು ಇಷ್ಟು ಪರ್ಸೆಂಟೇಜ್ ಹೊಡೆದ, ಇಂತಹವನು ಹೀಗೆ ಮನೆ ಹಾಳು ಮಾಡಿದ ಎಂದು ಹೇಳಿ ನಮಗೆ ಹೇಳುತ್ತಾರೆ, ಆ ಮಾಹಿತಿಯೆಲ್ಲ ನಮ್ಮ ಹತ್ತಿರ ಇದೆ. ಆ ಮಾಹಿತಿ ಪ್ರಕಾರ ತಾಸಸ ಸಭೆಯಲ್ಲಿ ಹೇಳುತ್ತೇವೆ, ಸರಿ ಇದ್ದರೆ ಅವರು ಆಕ್ಷನ್ ತೆಗೆದುಕೊಳ್ಳಲಿ, ಸರಿಯಿಲ್ಲದೆ ಇದ್ದರೆ ನೀವು ತಪ್ಪು ಮಾಡುತ್ತಿದ್ದೀರಿ ಎಂದು ಹೇಳಿ ತಾಸನ ಸಭೆಯಿಂದ ಸಸ್ಪೆಂಡ್ ಮಾಡಿ ಕಳುಹಿಸಲಿ ನಾವು ಹೋಗುವುದಕ್ಕೆ ತಯಾರಿದ್ದೇವೆ. ಕೆ.ಎಂ.ಎಫ್. ಪ್ರಾರಬ್ಧ ಪ್ರಾರಂಭವಾಗಿರುವುದು 1997-98ನೇ ಇಸವಿಯಿಂದ. ಇಲ್ಲಿ ಪ್ರಸ್ತಾಪ ಮಾಡುತ್ತಿರುವವರು ನಾವು ಮಾತ್ರ ತಿಳಿದುಕೊಂಡಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಎಲ್ಲಾ ಮುಕ್ಕಾಲು ಭಾಗ ಜನರಿಗೆ ಗೊತ್ತು. ಪ್ರತಿಯೊಬ್ಬ ಹಳ್ಳಿ ರೈತನೂ ಹೇಳುತ್ತಾನೆ. ತಮಿಳುನಾಡಿನಲ್ಲಿ ಒಂದು ಲೀಟರ್ ಹಾಲಿಗೆ ಇಷ್ಟು ರೇಟಿದೆ, ಆಂಧ್ರದಲ್ಲಿ ಇಷ್ಟಿದೆ ಹಾಗೂ ಮಹಾರಾಷ್ಟ್ರದಲ್ಲಿ ಇಷ್ಟಿದೆ ಇಲ್ಲಿ ಏಕೆ ಇಷ್ಟು ಕಡಿಮೆಗೆ ಕೊಡುತ್ತಿದ್ದಾರೆ ಎಂದು ಪ್ರತಿಯೊಬ್ಬ ರೈತರಿಗೂ ಕೂಡ ಗೊತ್ತಿದೆ. ಹೀಗಿದ್ದರೂ ಕೂಡ ಇಲ್ಲಿ ಕೆಲವರು ಭಾರಿ ಹೋರಾಟ ಮಾಡುತ್ತಾರಲ್ಲಾ, ಅದರ ಬದಲು ಅದರ ಸಂಬಂಧಪಟ್ಟ ಅಧ್ಯಕ್ಷರು ಯಾರಿರುತ್ತಾರೆ, ಅವರಿಗೆ ನೋಡಪ್ಪ, ಇದೆಲ್ಲಾ ತಪ್ಪು ಹೆಚ್ಚಾರು, ಇದೆಲ್ಲಾ ಮಾಡಬಾರದು ಒಳ್ಳೆಯದಲ್ಲ ಎಂದು ಇವರು ಇಲ್ಲಿ ಒದರುವುದರ

ಬದಲು ಅಲ್ಲಿ ಹೇಳಿಬಿಟ್ಟಿದ್ದರೆ ಅವನು ನೆಟ್ಟಗೆ ನೇರ ಆಗುತ್ತಿದ್ದನೆಂದು ನನಗೆ ಅನ್ನಿಸುತ್ತದೆ. ಈ ಫೇವರ್ ತೆಗೆದುಕೊಳ್ಳುವುದಕ್ಕೆ ಹೋಗಿ ಕೆಲವರು ಕ್ಯಾಚ್ ದಿ ಐ ಎಂದು ಹೇಳುತ್ತಾರೆ. ಪ್ರೊಸೆಷನ್ ಮುಂದೆ ಕುಣಿಯುವುದು ಬಟ್ಟೆ ಬಿಚ್ಚಿಕೊಂಡು. ಈ ರೀತಿ ಐ ಕ್ಯಾಚ್ ಮಾಡುವುದಕ್ಕೆ ಹೋಗಿ ಅವರ ವಂಶಕ್ಕೂ ಕೆಟ್ಟ ಹೆಸರು ಬಂತು. ಅವರನ್ನು ರಾಜಕೀಯವಾಗಿ ಮುಗಿಸಿದರು ಇವರು, ನಾವಲ್ಲ.

ಶ್ರೀ ಎಸ್.ಚೆಲುವರಾಯಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ನಾವು ಹೇಳುವುದೇನೆಂದರೆ ಇವರು ಹೇಳಿರುವಂತಹ ವಿಚಾರದಲ್ಲಿ ಅನ್ಯಾಯ ನಡೆದಿದ್ದರೆ ಎನ್‌ಕ್ವೈರಿ ಮಾಡುವುದಕ್ಕೆ ನಾವು ಯಾರೂ ಬೇಡ ಎನ್ನುವುದಿಲ್ಲ. ನಾವೂ ಕೂಡ ಶಾಸಕರಾಗಿ ಬಂದಿದ್ದೇವೆ. ಇದರ ಬಗ್ಗೆ ಅಸೆಂಬ್ಲಿಯಲ್ಲಿ ಸತ್ತು ಸಲ ಬಂದಿರುವುದರಿಂದ ಕಳೆದ ಒಂದೆರಡು ವರ್ಷದಿಂದ ಇಪ್ಪತ್ತು ಸಲ ಕಾಲಿಂಗ್ ಅಟೆನ್‌ಷನ್ ಆಗಿದೆ ಹಾಗೂ 150 ಪ್ರಶ್ನೆಗಳು ಬಂದಿವೆ. 1974ರಿಂದ ಸಮಗ್ರವಾಗಿ ಒಂದು ಸಿಬಿಐ ತನಿಖೆಯಾಗಲಿ, ಅದನ್ನು ಮಾಡಬೇಕು. ಇವರು ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾವು ಯಾರಿದಂಲೂ ಪ್ರೈಜ್ ತೆಗೆದುಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಟಿ.ಹೆಚ್.ಹನುಮೇಗೌಡ: ಈಗ ಇವರೆಲ್ಲಾ ಮಾತನಾಡುವುದನ್ನು ಕೇಳುತ್ತಿದ್ದೇನೆ, ಏನು ಇವರು ಇಷ್ಟಕ್ಕೆ ಸ್ಟಿಕಾನ್ ಆಗಿದ್ದರೆ ನಾನು ಮಾತನಾಡುತ್ತಿರಲಿಲ್ಲ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹನುಮೇಗೌಡರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಮಾಡಲಿ, ಅಥವಾ ಸದನ ಸಮಿತಿ ಮಾಡಿ ಎನ್‌ಕ್ವೈರಿ ಮಾಡಲಿ. 1974ರಲ್ಲಿ ಈ ಕೆ.ಎಂ.ಎಫ್ ಸ್ಥಾಪನೆಯಾಗಿದೆ. ಅಂದಿನಿಂದ ಇಂದಿನವರೆಗೂ ಆಡಳಿತ ಮಂಡಲಿಯಲ್ಲಿ ಆಗಿರುವಂತಹ ಅನ್ಯಾಯ ಇರಬಹುದು, ಅಪಾಯಿಂಟ್‌ಮೆಂಟ್ ವಿಚಾರ ಇರಬಹುದು, ಹಣದ ದುರುಪಯೋಗವಾಗಿರಬಹುದು, ಅದರ ಬಗ್ಗೆ ಸಮರ್ಪಕವಾಗಿ 2001ನೇ ಇಸವಿಯವರೆಗೂ ತನಿಖೆ ಮಾಡಲಿ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಇವರು ಮಾಡುವಂತಹ ಆಪಾದನೆ ಏನೇ ಇದ್ದರೂ ಕೂಡ ಅದನ್ನು ಎನ್‌ಕ್ವೈರಿ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಲೇಬೇಕು. ಅದು ಸದನದ ಕರ್ತವ್ಯ. ಅದರೆ ಅದನ್ನು ಮಾಡುವಾಗ 1974ನೇ ಇಸವಿಯಿಂದ 2001ನೇ ಇಸವಿಯವರೆಗೂ ಸಮರ್ಪಕವಾಗಿ ಎಲ್ಲಾ ತಪ್ಪುಗಳ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಆದೇಶ ಮಾಡುತ್ತೇವೆಂದು ಹೇಳಲೆಂದು ತಮ್ಮ ಸಮ್ಮುಖದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ.ಹೆಚ್.ಹನುಮೇಗೌಡ: ಅದನ್ನು ಎಲ್ಲರೂ ಸಹ ಸ್ವಾಗತ ಮಾಡುತ್ತಾರೆ. ಕೆ.ಎಂ.ಎಫ್. ಸಂಸ್ಥೆಯಲ್ಲಿ ನಡೆದಿರುವುದನ್ನು ಎಲ್ಲಾ ಹೇಳುವುದಕ್ಕೆ ಹೋದರೆ

ಸಮಯವಾಗುತ್ತದೆ. ಆದುದರಿಂದ ಒಂದೆರಡು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಸದಸ್ಯರಾದ ಮಂಜುರವರು ಮಾತನಾಡುತ್ತಾ ಪೌಚ್ ಫ್ಯಾಕ್ಟರಿ ಪ್ರಾರಂಭ ಮಾಡಿದ್ದಾರೆಂದು ಹೇಳಿದರು. ನಾನು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ, ಅದಕ್ಕೆ ಇಬ್ಬರು ಪಾರ್ಟನರ್ಸ್ ಇದ್ದಾರಂತೆ ಏಕೆ ಸ್ವಾಮಿ? ಆ ಫ್ಯಾಕ್ಟರಿ ಎಷ್ಟೋ ಕೋಟಿ ರೂಪಾಯಿ ಖರ್ಚು ಮಾಡಿ ಪ್ರಾರಂಭ ಮಾಡಿ ಅದಕ್ಕೆ ಇಬ್ಬರು ಪಾರ್ಟನರ್ ಮಾಡಿ 2-3 ದಿನದಲ್ಲಿ ಇಬ್ಬರಿಗೆ ವಹಿಸಿಕೊಟ್ಟಿದ್ದಾರೆ ಎಂದರೆ ಅವರು ಯಾರು ಸ್ವಾಮಿ? ಅವರು ಯಾರಿಗೆ ಸಂಬಂಧ? ವರ್ಷಕ್ಕೆ ಎಷ್ಟು ಹೋಗುತ್ತಿದೆ? ಇದನ್ನು ಈಗ ನಿಮಗೆ ಹೇಳುವುದಕ್ಕೆ ಸಂಕಟವಾದರೆ ಈ ಸದನ ಮುಗಿಯುವುದರೊಳಗೆ ಹೇಳಿ ನನ್ನದೇನೂ ಅಭ್ಯಂತರ ಇಲ್ಲ. ಏನು ಮಾಡುತ್ತೀರಿ, ಇಲಾಖೆ ಅಂಥಾದ್ದು ಏನು ಮಾಡಲಿ ಹೇಳಿ ಎಂದು ಅವರು ಹೇಳುತ್ತಾರೆ. ತಾವು ಇದನ್ನು ಹೇಳಬೇಕು. ರೋಸ್ಟರ್ ಸಿಸ್ಟಂ ಅನುಸರಿಸದೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ ಎಂದು ಗದ್ದಲವೋ ಗದ್ದಲವಾಯಿತು. ಹಳ್ಳಿಯವರು ಹೇಳುತ್ತಾರಲ್ಲಾ, ಏನು ತೆಗೆದುಕೊಳ್ಳುತ್ತೀರಾ ಅದನ್ನು ತೆಗೆದುಕೊಳ್ಳಿ ಎನ್ನುವ ಹಾಗೆ ಮಾಡಿಬಿಟ್ಟರೆ, ಈ ಶಾಸನಸಭೆ ಇರುವುದು ಏಕೆ? ಮಂತ್ರಿಮಂಡಲ ಏಕೆ? ಇದಕ್ಕೆ ಮಂತ್ರಿಗಳು ಏಕೆ? ಸಾಪಿರಾರು ಜನ ಅಧಿಕಾರಿಗಳು ಈ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್‌ನಲ್ಲಿ ಇರುವುದು ಏಕೆ? ಹೇಳಿ ನೋಡೋಣ? ಇದೆಲ್ಲಾ ಆಗಬಹುದಾ? ಇವತ್ತು ಏನೇನು ಚಾರ್ಜಸ್ ಮಾಡುತ್ತಿದ್ದೇವೆ ಇದು 1996-97ನೇ ಸಾಲಿನಿಂದ ನಿರಂತರವಾಗಿ ನಡೆದುಕೊಂಡು ಬಂದಿದೆ. ನಿಮ್ಮ ಅಧಿಕಾರಿಗಳೊಬ್ಬರು ಕೆ.ಎಂ.ಎಫ್. ಬೋರ್ಡ್‌ನಲ್ಲಿ ಡೈರೆಕ್ಟರ್ ಅವರು ಅಬ್ಜೆಕ್ಷನ್ ಬರೆಸಿದ್ದಾರಾ? ಅವರು ಏನು ಮಾಡುತ್ತಿದ್ದರು? ನಿಮಗೆ ಅಥವಾ ಸರ್ಕಾರಕ್ಕೆ ರಿಪೋರ್ಟ್ ಮಾಡಿದ್ದಾರಾ? ರೈತರ ಸಂಸ್ಥೆಯಲ್ಲಿ ಈ ರೀತಿ ಅನ್ಯಾಯವಾಗುತ್ತಿದೆ. ಕಾನೂನು ಕಟ್ಟಳೆ ಇಲ್ಲದೆ ಡೈರಿಯಲ್ಲಿ ಯದ್ವಾತದ್ವಾ ಮೇಯುತ್ತಿದ್ದಾರೆ ಎಂದು ನಿಮಗೇನಾದರೂ ರಿಪೋರ್ಟ್ ಕೊಟ್ಟರ? ಅದು ನಿಮ್ಮ ಗಮನಕ್ಕೆ ಬಂದಿದೆಯಾ? ಗಮನಕ್ಕೆ ಬಂದಿದ್ದರೆ ಇದರ ಬಗ್ಗೆ ನೀವೇಕೆ ಆ್ಯಕ್ಷನ್ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ನೀವು ದಯವಿಟ್ಟು ಹೇಳಬೇಕಾಗುತ್ತದೆ. ಏತ್ ಅಥಾರಿಟಿ ಹೇಳುತ್ತೇನೆ, ಇವತ್ತಲ್ಲ ನಾಳೆ ಇದು ಜಡ್ಜ್‌ಮೆಂಟ್ ಇಲ್ಲೋ, ಅಲ್ಲೋ ಆಗುತ್ತದೆ. ಒಂದು ದಿವಸಕ್ಕೆ 25,000 ಲೀಟರ್ ನೀರನ್ನು ಮದರ್ ಡೈರಿ ಟ್ಯಾಂಕ್‌ಗೆ ತುಂಬಿ ಪ್ರತಿನಿತ್ಯ ದುಡ್ಡು ಹೊಡೆಯುತ್ತಿದ್ದಾರೆ. ಹೇಗೆ ಎಂದು ಕೇಳಬಹುದು? ಒಂದು ಸಾರಿ ದೂರು ಹೋಯಿತು. ಒಂದು ದಿನ ಪೋಲೀಸರು ಮಫ್ತಿನಲ್ಲಿ ಹೋಗಿ ಓಡಿದರು. ಸ್ವಾಮಿ, ನಿಜವೇ? ಅದರ ಬಗ್ಗೆ ಏನು ಆ್ಯಕ್ಷನ್ ತೆಗೆದುಕೊಂಡಿರಿ? ರೈತರ ಹಾಲನ್ನು ಈ ರೀತಿ ನೀರು ತುಂಬಿ ಮಾರಾಟ ಮಾಡುವುದರಿಂದ ಕನ್ಸ್ಯೂಮರ್ ಕೆಟ್ಟ, ಎಸ್.ಎನ್.ಎಫ್ ಅದು ಕಡಿಮೆ ಬಂದು ರೈತ ಕೆಟ್ಟ, ದುಡ್ಡು ಹೋಗಿ ಯಾರದೋ ಜೇಬಿಗೆ ಸೇರಿತು. ಇದು ಹೇಗೆ ಎಂದು ಸ್ನೇಹಿತರು ಕೇಳಬಹುದು. ಪೋಲೀಸಿನವರು ವಾರಗಟ್ಟಲೆ ಮಫ್ತಿನಲ್ಲಿ ಕುಳಿತು ಒಂದು ದಿನ ನೀರಿನ ಹೊಂಡದ ಹತ್ತಿರ ತೆಗೆದುಕೊಂಡು ಹಾಲು ತೆಗೆದು ನೀರು ತುಂಬುತಿದ್ದಾಗ ಪೋಲೀಸಿನವರು ಹಿಡಿದು ಕೊಂಡಿದ್ದಾರೆ. ನೀವು ಏನು ಮಾಡುತ್ತಿದ್ದೀರಿ?

ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು. ನಿಮ್ಮ ರಿಜಿಸ್ಟಾರ್‌ರವರು ಏನು ಮಾಡುತ್ತಿದ್ದರು? ನಿಮ್ಮ ಇಲಾಖೆಯಲ್ಲಿ ಯಾರ್ಯಾರು ಇದ್ದಾರೆ, ಅವರು ನಿಮಗೆ ಏನಾದರೂ ವರದಿಯನ್ನು ಕೊಟ್ಟಿದ್ದಾರಾ? ನಾವು ಇದನ್ನು ಕೇಳಬಾರದೇ? ನಾವು ಹಳ್ಳಿಯವರು, ಹಳ್ಳಿಯವರು ಓಟ್ ಕೊಟ್ಟಿಲ್ಲವೇ? ಈ ರೀತಿಯಲ್ಲಿ ಮೋಸವಾಗಬಹುದಾ? ತಾವು ದಯಮಾಡಿ ಇದನ್ನು ಹೇಳಿ, ಮತ್ತೆ ಪ್ರತಿ ಲೀಟರ್ ಹಾಲಿಗೆ ಒಂದು ರೂಪಾಯಿ ಸೆಸ್ ಎಂದು ಇದೆಯಂತೆ. ಅದು ನನಗೆ ಅರ್ಥವಾಗುವುದಿಲ್ಲ, ಅದನ್ನು ಮಾನ್ಯ ಮಂತ್ರಿಯವರು ಹೇಳಬೇಕು. ಎಷ್ಟು ಲೀಟರ್ ಹಾಲು ಪ್ರತಿ ದಿವಸ ಕಲೆಕ್ಟ್ ಆಗುತ್ತದೆ, ಅದಕ್ಕೆ ಲೀಟರ್‌ಗೆ ಒಂದು ರೂಪಾಯಿಯಂತೆ ಸೆಸ್ ಹಾಕಿದ್ದಾರೆ. ಇದು ಯಾರ ಜೇಬಿಗೆ ಹೋಯಿತು? ಏತಕ್ಕಾಗಿ ಖರ್ಚು ಮಾಡಿದ್ದಾರೆ? ಇದಕ್ಕೆ ಹೊಣೆಗಾರರಾದ ಅಧಿಕಾರಿಗಳು ಏನು ಮಾಡುತ್ತಿದ್ದರು? ಇನ್ನು ಇಲ್ಲಿ ಡೈರಕ್ಟರ್ ಇದ್ದಾರೆ; ಇವರು ಮೀಟಿಂಗ್‌ಗೆ ಲೇಟಾಯಿತೆಂದು ಪೆನ್ನು ಹಿಡಿದುಕೊಂಡು ಹೋಗುತ್ತಾರೆ, ಇಂತಹ ಡೈರಕ್ಟರ್‌ಗಳು ಇದ್ದಾರೆ.

ಶ್ರೀ ಕೆ.ಶ್ರೀನಿವಾಸ ಗೌಡ ಕುದುವನಹಳ್ಳಿ: ಮಾನ್ಯ ಉಪಾಧ್ಯಕ್ಷರೇ, ಶ್ರೀ ಹನುಮೇಗೌಡರು ರೈತರು, ರೈತರ ಮಕ್ಕಳು ಎಂದು ಹೇಳುತ್ತಿದ್ದಾರೆ. ಅವರೂ ಸಹ ರೈತರ ಮಕ್ಕಳೆಂದು ನಾನು ಜ್ಞಾಪಕ ಮಾಡಿದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಸೆಂಟ್ರಲ್ ಜೈಲ್‌ನಲ್ಲಿ ಇದ್ದಾರೆ, ರೈತರ ಮಕ್ಕಳು. ಹೋಗಿ ಕರೆದುಕೊಂಡು ಊರೊಳಗೆ ಪ್ರೊಸೆಷನ್ ಮಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಸಾಕಷ್ಟು ನಿಯಮಗಳನ್ನು ಹೇಳಿ, ಇಲ್ಲಿ ಗಮನ ಸೆಳೆಯುವ ಸೂಚನೆಯಡಿಯಲ್ಲಿ ಎಷ್ಟು ಕಾಲ ಮಾತನಾಡಬೇಕೆಂಬುದನ್ನು ಹೇಳಿಲ್ಲ, ಇದು ಕೇಳುವುದಕ್ಕೆ ಚೆನ್ನಾಗಿದೆ, ಅನುಕೂಲವಾಗಿದೆ, ಎಂದು ಭಾಷಣವನ್ನು ಕೇಳಿಕೊಂಡು ಕುಳಿತಿದ್ದಾರೆ. ಇದನ್ನು ಎಷ್ಟು ಕಾಲದಲ್ಲಿ ಮುಗಿಸಬೇಕು? ಕ್ವಾರಿಫಿಕೇಷನ್ ಎಷ್ಟು ಕೇಳಬೇಕು? ಏನು ಮಾಡಬೇಕೆಂಬುದು ಹೇಳುತ್ತಿಲ್ಲ. ತಾವು ಈ ವಿಷಯವನ್ನು ಚರ್ಚೆಗೆ ಅವಕಾಶ ಮಾಡಿ ಕೊಟ್ಟರೆ ನಾವು ಇದರ ಮೇಲೆ ಒಂದು ಗಂಟೆ ಕಾಲ ಮಾತನಾಡಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಮಾತನಾಡುವಾಗ ಅನಾನುಕೂಲವಾಗಿದ್ದರೂ ನಾವು ಸುಮ್ಮನೆ ಕುಳಿತಿರಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ: ಅದು ತಮ್ಮ ಪರವಾಗಿದ್ದರೆ ಬೇಡ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ತಾವು ಈ ರೀತಿಯಾಗಿ ಅವಕಾಶವನ್ನು ಕೊಟ್ಟರೆ, ಬೇಕೆಂದೇ ಅವಹೇಳನ ಮಾಡುವ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ತಾವು ಒಂದು ಟೈಂ ಲಿಮಿಟ್ ಅನ್ನು ಫಿಕ್ಸ್ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಮೊದಲ ಬಾರಿಗೆ ನಿಮ್ಮ ನಾಯಕರು ಕಾಲ ಮತ್ತು ನಿಯಮಗಳ ಬಗ್ಗೆ ಪ್ರಸ್ತಾಪ ಮಾಡಿದರು, ಅದಕ್ಕಾಗಿ ನಮ್ಮ ವಂದನೆಗಳನ್ನು ಸ್ವೀಕರಿಸಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ ನಾನು ಒಂದು ಮಾತನ್ನು ಹೇಳಿದ್ದೆ, ಈಗ ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಇಲ್ಲ. ನಾನು ಆ ದಿವಸ ಹೇಳುವಾಗ ಇದೇ ಸ್ಥಳದಿಂದ ಮಾತನಾಡಿದೆ, ನೀವು ರೈತರ ಪರವಾಗಿ ಆರಿಸಿ ಬಂದಿದ್ದೀರಿ, ತಾವು ಮುಖ್ಯಮಂತ್ರಿಗಳಾಗಿದ್ದೀರಿ, ನಿಮ್ಮ ಸರ್ಕಾರವೂ ಬಂದಿದೆ, ರೈತರೆಲ್ಲಾ ನಿಮಗೆ ಓಟು ಕೊಟ್ಟಿದ್ದಾರೆ, ಜನಗಳಿಗೆ ಒಂದು ಆಸೆ ಇದೆ, ಅದೇನೆಂದರೆ ನೀವು ನಿಮ್ಮ ಅಧಿಕಾರ ಮತ್ತ ನಿಮ್ಮ ದಕ್ಷತೆ, ಪ್ರಾಮಾಣಿಕತೆ, ಮಾನ್ಯ ಏರೇಂದ್ರಪಾಟೀಲ್‌ರವರು ಹಾಗೂ ಮಾನ್ಯ ಹನುಮಂತಯ್ಯನವರಿಗಿಂತ ಮೇಲಿನ ಮಟ್ಟಕ್ಕೆ ಹೋಗಬೇಕೆಂದು. ನೀವು ಒಂದು ಪಕ್ಷ ಆ ಮಟ್ಟಕ್ಕೆ ಹೋಗಲು ಆಗದಿದ್ದರೆ, ಆ ಲೆವಲ್‌ನಲ್ಲಾದರೂ ಇರಿ, ಆದರೆ ನಮ್ಮ ಹೊಳೆನರಸೀಪುರದ ದೊಡ್ಡ ಸ್ವಾಮಿಯ ಮಾತನ್ನು ಕೇಳಿ ಪಾತಾಳಕ್ಕೆ ಹೋಗಬೇಡಿ ಎಂದು ಹೇಳಿದ್ದೆ. ಆದರೆ ಈಗ ಈ ಸರ್ಕಾರ ಸ್ವಲ್ಪ ಹೆಚ್ಚು ಕಡಿಮೆ ಆ ಕಡೆಗೆ ದೃಷ್ಟಿ ಹೋಗಿದೆ, ಆದರೆ ಇನ್ನು ಪಾತಾಳಕ್ಕೆ ಇಳಿದಿಲ್ಲ. ಮಾನ್ಯ ಸಹಕಾರಿ ಸಚಿವರೇ, ಇದು ಎಲ್ಲಾ ಏಕೆ ಮಾಡುತ್ತಾರೆಂದರೆ ನಿಮ್ಮ ಉದ್ಧಾರಕ್ಕೆ ಅಲ್ಲ, ನಿಮಗೆ ಒಳ್ಳೆಯ ಹೆಸರು ಬರಲಿ ಎಂದು ಅಲ್ಲ, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ ಎಂದು ಅಲ್ಲ, ಇಲ್ಲಿ ಹಾಳಾಗುವವರು ನೀವು, ನಿಮ್ಮ ಸರ್ಕಾರ ಹಾಳಾಗುವುದು, ನಿಮ್ಮ ಕಾಂಗ್ರೆಸ್ ಪಾರ್ಟ ಹಾಳಾಗುತ್ತದೆ. ನನಗೆ ಒಂದು ಸಣ್ಣ ಕತೆಯನ್ನು ಪ್ರೈಮರಿ ಶಾಲೆಯಲ್ಲಿ ಓದಿದಂಥಾದ್ದು ಅದನ್ನು ಹೇಳುತ್ತೇನೆ, ಇದು ಅದಕ್ಕೆ ಹೊಂದಿಕೊಳ್ಳುವಂತಹ ಕತೆಯಾಗಿದೆ. ಒಂದು ಮುದಿ ಗುಳ್ಳೆ ನರಿ ಹೊಟ್ಟೆಗೆ ಇಲ್ಲದೇ ಹೋಗುತ್ತಿತ್ತು, ಅಲ್ಲಿ ಹಕ್ಕಿ, ಪಕ್ಷಿಗಳು ತಿಂದು ಉಳಿಸಿದಂತಹ ಆಹಾರ ಸಿಕ್ಕಿತು, ಅದನ್ನು ತಿಂದು ಇನ್ನೂ ಬೇಕೆಂದರೆ ಅದಕ್ಕೆ ಆಹಾರ ಸಿಗಲಿಲ್ಲ. ಆಗ ಅದು ಇನ್ನು ಮುಂದಕ್ಕೆ ಹೋಗುತ್ತಾ ಇತ್ತು, ಅಲ್ಲಿ ಮರದ ಮೇಲೆ ಒಂದು ಕಾಗೆ ಮಾಂಸದ ತುಂಡನ್ನು ಕಚ್ಚಿಕೊಂಡಿತ್ತು. ಅದನ್ನು ಅದು ತಿಂದಿರಲಿಲ್ಲ. ಅದನ್ನು ಏನಾದರೂ ಮಾಡಿ ಕೀಳಬೇಕು. ಆ ನರಿ ಕಾಗಣ್ಣ ಅಯ್ಯೋ ನಿನ್ನ ರಾಗ, ಅಯ್ಯೋ ಎಷ್ಟು ಮಧುರ, ನೀನು ಹಾಡುವುದಕ್ಕೆ ಶುರು ಮಾಡಿದರೆ ಇಡೀ ದೇಶವೇ ಕೇಳುತ್ತೆ ಅಂತ ಹೇಳಿತಂತೆ. ನಿನ್ನ ಹಾಡನ್ನು ದೇವಲೋಕದಿಂದ ಅಪ್ಸರೆಯರು ಬಂದು ನಿನ್ನ ರಾಗ ಕೇಳುತ್ತಾರೆ, ಅಷ್ಟು ಚೆನ್ನಾಗಿ ಹಾಡುತ್ತೀಯಾ, ಎಂದು ಹೇಳಿದಾಗ ಈ ಕಾಗೆ ಮಂಕು ಮುಂಡೇದು ಬಾಯನ್ನು ಬಿಟ್ಟಿತು, ಆಗ ಅದರ ಬಾಯಲ್ಲಿದ್ದ ಮಾಂಸದ ತುಂಡು ಕೆಳಗಡೆ ಬಿತ್ತು. ಇವರ ಪರಿಸ್ಥಿತಿ ಹಾಗಾಗಿದೆ. ಅದನ್ನು ಹೊಡೆದು ಕೊಳ್ಳುವುದಕ್ಕೆ ಇವರು ಇದೆಲ್ಲಾ ಪ್ಲಾನ್ ಮಾಡುತ್ತಿದ್ದಾರೆ, ಇದು ಇವರಿಗೆ ಅರ್ಥವಾಗಿಲ್ಲ. ಇವರು ಏನು ತಿಳಿದುಕೊಂಡಿದ್ದಾರೆಂದರೆ, ನಮ್ಮ ಬಗ್ಗೆ ಎಷ್ಟು ಅನುಕಂಪವಿದೆ, ಎಂದು ತಿಳಿದುಕೊಂಡಿದ್ದಾರೆ. ಇವರ ಕೈಯಲ್ಲಿ ಇದೆಲ್ಲವನ್ನೂ ಏಕೆ ಮಾಡಿಸುತ್ತಿದ್ದಾರೆಂದರೆ, ಮುಂದಿನ ಸಲ ನಿಮ್ಮನ್ನು ಮನೆಗೆ ಕಳುಹಿಸಿ ಇಲ್ಲಿ ಅವರು ಕೂರುವುದಕ್ಕೆ ಮಾಡುತ್ತಿದ್ದಾರೆ, ಇದರಲ್ಲಿ ಇರುವುದು ಇಷ್ಟೆ ಉದ್ದೇಶ, ಇದನ್ನು ನೀವು ಅರ್ಥ ಮಾಡಿಕೊಳ್ಳಿ.

ಶ್ರೀ ಎನ್.ಚಲುವರಾಯಸ್ವಾಮಿ: ನಿಮ್ಮ ಕೈಯಲ್ಲಿ ಕೂರುವುದಕ್ಕೆ ಆಗುವುದಿಲ್ಲವೆಂಬುದು ಕನ್‌ಫರ್ಮ್ ಆಗಿಹೋಯಿತು.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಉಪಾಧ್ಯಕ್ಷರೇ, ನಾನು ಆ ಭಾಗದಲ್ಲೂ ಕುಳಿತಿದ್ದೆ, ನಾನು ಮಂತ್ರಿಯೂ ಆಗಿದ್ದೆ. ನೀವು ಆಗಿಲ್ಲ, ಮುಂದೆ ನೀವು ಆಗಿ, ನನಗೆ ನೀವು ಅದನ್ನು ಹೇಳುವುದಕ್ಕೆ ಹೋಗಬೇಡಿ. ನಾನು ಆ ಕಡೆ ಇದ್ದವನೇ, ಒಬ್ಬೊಬ್ಬರನ್ನೇ ಬಿಟ್ಟು ಬಿಟ್ಟು ಬಂದೆ. ಇವರನ್ನು ಪಾತಾಳಕ್ಕೆ ಕಳುಹಿಸುತ್ತಿದ್ದಾರೆ. ಇದು ಇವರಿಗೆ ಅರ್ಥವಾಗಿಲ್ಲ, ಇವರು ಅವರ ಮಾತನ್ನು ಕೇಳುತ್ತಾ ಕುಳಿತರೆ, ಇವರ ಜಾಗವನ್ನು ವೆಕೇಟ್ ಮಾಡಬೇಕಾಗತ್ತದೆ. ನೀವು ನಿಜವಾಗಿಯೂ ರೈತರ ಮನೆಯಿಂದ ಬಂದವರು, ಯಾರು ಸರಿಯಾಗಿ ಕೆಲಸವನ್ನು ಮಾಡಿದ್ದಾರೆ, ಅವರಿಗೆ ನಾಲ್ಕು ಪ್ರಮೋಷನ್ ಅನ್ನು ಕೊಡಿ, ನಾಲ್ಕು ಇನಕ್ರಿಮೆಂಟ್ ಮಾಡಿ, ಅದನ್ನು ಜನರು ಮೆಚ್ಚಿಕೊಳ್ಳುತ್ತಾರೆ. ಆದರೆ ಯಾರು ನಿಮ್ಮ ಜಾಗದ ಮೇಲೆ ಕಣ್ಣು ಇಟ್ಟಿದ್ದಾರೋ ಅವರ ಮಾತನ್ನು ಕೇಳಿಕೊಂಡು, ಅವರು ಕಣ್ಣೀರು ಹಾಕಿದರು, ಕಾಲು ಹಿಡಿದರು, ಎಂದು ನೀವು ಅಯ್ಯೋ ಪಾಪವೆಂದರೆ ಮನೆಗೆ ಹೋಗುತ್ತೀರಿ. ಇದು ನೂರಕ್ಕೆ ನೂರರಷ್ಟು ಡೆಫನೆಟ್, ಇಲ್ಲಿ ಸರಿಯೋ, ತಪ್ಪೋ, 10- 12 ವರ್ಷಗಳ ಕಾಲ ರಾಜ್ಯವನ್ನು ಆಳಿದರು. ಇದರಲ್ಲಿ ಯಾರ ದೌರದೃಷ್ಟವೊ ಐದು ವರ್ಷಗಳ ಕಾಲ ಬರ ಪರಿಸ್ಥಿತಿ ಬಂತು, ಆಗ ಸರಿಯಾಗಿ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಈಗ ಹುಮ್ಮಸ್ಸಿನಿಂದ ಕೆಲಸವನ್ನು ಮಾಡಬೇಕೆಂದು ತಯಾರು ಇದ್ದಾರೆ, ಅದಕ್ಕೆ ತಕ್ಕಂತೆ ನೀವು ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದೀರಿ. ನನಗೆ ಯಾರಿಂದ ಏನೂ ಆಗಬೇಕಾಗಿಲ್ಲ, ನಾನು ಎಲ್ಲವನ್ನೂ ಮುಗಿಸಿಕೊಂಡಿರುವವನು, ನಾನು ಪೂರ್ವಾಶ್ರಮದಲ್ಲಿ ಇದ್ದೆ, ನಿಮಗೆ ಒಳ್ಳೆಯದಾಗಲಿ ಎಂಬ ಭಾವನೆ ಇರುವವರ ಪೈಕಿ ನಾನೂ ಒಬ್ಬನಾಗಿದ್ದೇನೆ. ನಾನು ಈ ಮಾತನ್ನು ಹೇಳಿದರೆ ನನ್ನ ಸ್ನೇಹಿತರು ಏಕೆ ಈ ರೀತಿ ಹೇಳುತ್ತಿದ್ದೀರೆಂದು ಕೇಳುತ್ತಾ ಇರುತ್ತಾರೆ. ಅದಕ್ಕೆ ನಾನು ಪೂರ್ವಾರ್ಜಿತ ಸಂಬಂಧ ಹೋಗಲ್ಲ ಕಾಣಪ್ಪ, ಸ್ವಲ್ಪ ಸ್ವಲ್ಪ ಇರುತ್ತದೆಂದು ಹೇಳಿದೆ. ಆದರೂ ಫರ್ಮಾಗಿ ನಿಮ್ಮ ಕಡೆ ಇರುತ್ತೇನೆಂದು ಹೇಳಿದೆ. ಇನ್ನು ಕೊನೆಯದಾಗಿ ಮಾನ್ಯ ಸಚಿವರನ್ನು ಕೇಳುವುದೇನೆಂದರೆ ನೋಟೀಸ್ ಅನ್ನು ನಾಳೆ ಜಾರಿ ಮಾಡಿಸಿ ಶಾಸನ ಸಭೆಯಲ್ಲಿ ನಾಳೆ ಸಾಯಂಕಾಲ 5 ಗಂಟೆಯೊಳಗೆ ನಮಗೆ ಹೇಳಬೇಕು. ಆಗ ನಿಮ್ಮ ಎಫಿಷಿಯನ್ಸಿಯನ್ನು ತೋರಿಸಿದಂತೆ ಆಗುತ್ತದೆ. ನಿಮಗೆ ದಾಕ್ಷಿಣ್ಯವೋ, ಅಥವಾ ಕೆಲಸ ಮಾಡುವುದಕ್ಕೆ ದಕ್ಷತೆ ಇಲ್ಲವೋ, ಇವರಡರಲ್ಲಿ ಯಾವುದಾದರೂ ಒಂದು ಇದ್ದರೆ, ನಾನು ನಿಮಗೆ ಏನೂ ಹೇಳುವುದಿಲ್ಲ. ನಿಮಗೆ ದಾಕ್ಷಿಣ್ಯವಿಲ್ಲದೆ, ದಕ್ಷತೆಯಿಂದ ಕೆಲಸವನ್ನು ಮಾಡಬೇಕೆಂದು ಇದ್ದರೆ ಇದೆಲ್ಲವನ್ನೂ ಮಾಡಿ. ನಿಮಗೆ ನಾಲ್ಕು ತಿಂಗಳುಗಳು ಬೇಕಾ, ಈ ಒಂದು ವರದಿಯನ್ನು ಕೊಡುವುದಕ್ಕೆ? ನೀವು ಇಂಥಾದ್ದರ ಮೇಲೆ ಏನೂ ಆ್ಯಕ್ಷನ್ ತೆಗೆದುಕೊಳ್ಳುವುದಿಲ್ಲ, ಇವರು ಅನ್‌ಫಿಟ್, ಇವರಿಗೆ ಓಟು ಕೊಡುವಂಥಾದ್ದು ಎಡವಟ್ಟಿಂದು, ಹೇಳುತ್ತಾರೆ. ಮಾನ್ಯ ರೇವಣ್ಣನವರು ಸ್ವಿಡ್ಜರ್‌ಲ್ಯಾಂಡ್‌ಗೆ ಹೋಗಿದ್ದರು, ಏನೇನೋ ಮಾಡಿದರು ಎಂದು ಹೇಳುತ್ತಾರೆ. ಯಾರ್ಯಾರು ಯಾವ ಯಾವುದಕ್ಕೋ

ಹೋಗುತ್ತಾರೆ, ಅದು ನಮಗೆ ಏನು ಗೊತ್ತು. ಅವರು ಆ ರೀತಿ ಹೋಗಿದ್ದರೆ, ಡೈರಿಯಿಂದ ಟಿ.ಎ., ಡಿ.ಎ., ಯನ್ನು ತೆಗೆದುಕೊಳ್ಳಬಾರದಿತ್ತು. ಏನೋ ಅನೇಕ ಜನ ರಾಜಕಾರಣಿಗಳು ಹೋಗಿ ಬರುತ್ತಾರಂತೆ, ಇವರು ಏತಕ್ಕೆ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಇನ್ನು ಚಿತ್ರದುರ್ಗದಲ್ಲಿ ರೋಸ್ಟರ್ ಸಿಸ್ಟಂ ಅನ್ನು ಅನುಸರಿಸುವುದಿಲ್ಲವೆಂದು ಏರಾವೇಶದಲ್ಲಿ ಮನೆಗೆ ಕಳುಹಿಸಿದ್ದಾರಂತಲ್ಲಾ ಅವರು ಏನು ಪಾಪ ಮಾಡಿದ್ದರು. ಇಲ್ಲಿ ಮೇಯುತ್ತಾ ಇದ್ದಾರಲ್ಲಾ ಸ್ವಾಮಿಗಳು ಇವರು ಏನು ಪುಣ್ಯ ಮಾಡಿದ್ದಾರೆ ನಿಮಗೆ? ನೀವು ಇದರ ಬಗ್ಗೆ ಏಕೆ ಆ್ಯಕ್ಷನ್ ಏನು ತೆಗೆದುಕೊಳ್ಳಲಿಲ್ಲ? ಈ ಕಾನೂನು ಇರುವಂಥಾದ್ದು ಎಲ್ಲರಿಗೂ ಒಂದೆಯೋ, ಒಬ್ಬರಿಗೆ ಒಂದೊಂದೋ, ನೀವು ಚಿತ್ರದುರ್ಗದ ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಬ್ಯಾಂಕ್ ಅನ್ನು ಸೂಪರ್ ಸೀಡ್ ಮಾಡಿದ್ದೀರಂತಲ್ಲಾ, ಇದಕ್ಕೆ ಕಾರಣವೇನೆಂದರೆ ಇಲ್ಲಿ ರೋಸ್ಟರ್ ಸಿಸ್ಟಂ ಅನ್ನು ಅನುಸರಿಸಿಲ್ಲವೆಂದು ಮಾನ್ಯ ಕಾಗೋಡು ತಿಮ್ಮಪ್ಪನವರೇ, ಕೆ.ಎಂ.ಎಫ್.ನಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದಾರೆ, ನೀವು ಏನು ಮಾಡುವುದಕ್ಕೆ ಆಗುತ್ತದೆ, ಮಂತ್ರಿಗಳು. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ನೀವು ಮಂತ್ರಿಗಳು ಏನು ಮಾಡುವುದಕ್ಕಾಗುತ್ತದೆ? ಅಲ್ಲಿ ನಿಮ್ಮ ಮೂರರಷ್ಟು ಮಾಡಿ ಇಟ್ಟು ಕೂರಿಸಿದ್ದಾರೆ. ಕೆ.ಎಂ.ಎಫ್ ಡೈರಿ ಯೂನಿಯನ್ ಸಾಮಾಜಿಕ ನ್ಯಾಯ ಹುಟ್ಟಿರುವುದೇ ಅಲ್ಲಿ. ಅಲ್ಲಿ ಚಿತ್ರದುರ್ಗದಲ್ಲಿ ವಜಾ ಮಾಡಿದ್ದೀರಿ, ಇಲ್ಲಿ ಏಕೆ ಇಟ್ಟುಕೊಂಡಿದ್ದೀರಿ, ನಿಮಗೆ ದಾಕ್ಷಿಣ್ಯವೋ, ಅಂಜಿಕೆಯೋ, ಅಥವಾ ರೈತರ ಮೇಲೆ ಏನಾದರೂ ಸಿಟ್ಟು ಇದೆಯೋ, ವರ್ಷವೆಲ್ಲಾ ಇವರು ಹೊಲ ಉತ್ತು, ದೇಶಕ್ಕೆ ಅನ್ನ ಕೊಡುತ್ತಾರೆಂದು ಅವರು ಬುದ್ಧಿಯನ್ನು ಸರಿ ಮಾಡುತ್ತೇವೆಂದು ಸರಿ ಮಾಡುತ್ತಿದ್ದೀರಾ? ನೀವು ಹೇಳಬೇಕು. ಈ ರೀತಿ ಸುಮ್ಮನೆ ಕುಳಿತರೆ ಆಗುವುದಿಲ್ಲ. ಅದನ್ನು ಅವರು ಹೇಳಿಬಿಟ್ಟರೆ ನಾನು ಕುಳಿತುಕೊಂಡು ಬಿಡುತ್ತೇನೆ.

ಉಪಾಧ್ಯಕ್ಷರು: ಆಯಿತು, ತಾವು ಕುಳಿತುಕೊಳ್ಳಿ, ಹೇಳಿಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ನೀವು ಕುಳಿತುಕೊಳ್ಳದಿದ್ದರೆ ಅವರು ಹೇಗೆ ಹೇಳುತ್ತಾರೆ?

ಶ್ರೀ ಕೆ.ಹೆಚ್.ಹನುಮೇಗೌಡ: ನಾನು ರೈತರಿಂದ ಓಟು ತೆಗೆದುಕೊಂಡು ಇಲ್ಲಿಗೆ ಬಂದಿರುವುದು, ರೈತರಿಗೆ ಅನ್ಯಾಯವಾಗುವುದನ್ನು ನೋಡಿ ಹೊಟ್ಟೆ ಉರಿದು ಈ ಮಾತನ್ನು ಹೇಳುತ್ತಿದ್ದೇನೆ. ತಾವು ಇದನ್ನು ಕೇಳಿದರೆ ಕೇಳಬಹುದು, ಬಿಟ್ಟರೆ ಬಿಡಬಹುದು. ಮಾನ್ಯ ಚಂದ್ರೇಗೌಡರೇ, ನೀವು ಅವರು ಹೇಳಿದ ಮಾತನ್ನು ಕೇಳಿಕೊಂಡು ಪೂರ್ವಕ್ಕಾದರೂ ಹೋಗಿ, ಇಲ್ಲ ಅವರು ಹೇಳುವ ಮಾತು ಸರಿಯಾಗಿಲ್ಲವೆಂದು, ಬಂದೂಬಸ್ತು ಆಗಿ ಉಳಿದುಕೊಂಡು ರೈತರ ದೃಷ್ಟಿಯಿಂದ ಉತ್ತಮವಾದಂತಹ ಕೆಲಸವನ್ನು ಮಾಡಿಕೊಂಡು ಪಶ್ಚಿಮಕ್ಕಾದರೂ ಬನ್ನಿ ಎಂದು ಹೇಳುತ್ತೇನೆ. ಇಷ್ಟು ಹೇಳಿ.....

3.50 ಪಿಎಂ

ಮಾನ್ಯ ಸಚಿವರು ಅಥಾರಿಟೇಟೀವ್ ಆಗಿ ಒಂದು ತಿಂಗಳು ಟೈಂ ಕೊಟ್ಟು ಕಲಂ 64ರ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಬೇಕು, ಆಮೇಲೆ ನಮ್ಮ ಸ್ವಾಮಿಯವರು ಹೇಳಿದ ಹಾಗೆ ಬೇಕಾದರೆ 1974ರಿಂದಲೂ ಎನ್‌ಕ್ವೈರಿ ಮಾಡಿ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಅವರು ಕೇವಲ ಮೂರು ವರ್ಷದ್ದು ಮಾತ್ರ ಎನ್‌ಕ್ವೈರಿ ಮಾಡಿ ಎಂದು ಕೇಳಿದರಲ್ಲಾ, ಅದರುದ್ದೇಶವೇನು? ಮಾನ್ಯ ಸದಸ್ಯರಾದ ಹನುಮೇಗೌಡರು ವಕೀಲರು ಚೆನ್ನಾಗಿ ಮಾತನಾಡುತ್ತಾರೆ, ಅದರೆ 1974ರಿಂದಲೂ ತನಿಖೆಯಾಗಲೆಂದು ಹೇಳಬೇಕಾಗಿತ್ತು.

ಶ್ರೀ ಕೆ.ಹೆಚ್.ಹನುಮೇಗೌಡ: ಆಗಬಹುದು, ಇಷ್ಟನ್ನು ಹೇಳಿ ನಿಮ್ಮ ಪ್ರಾಮಾಣಿಕತೆಯನ್ನು, ಜನರ ಬಗ್ಗೆ ಇರುವ ಅನುಕಂಪವನ್ನು, ನಿಮ್ಮ ಸರ್ಕಾರದ ಕಮಿಟ್‌ಮೆಂಟ್ ಅನ್ನು ಈ ನಾಲ್ಕು ಕೋಟಿ ರೈತರಿಗಾಗಿರುವ ಅನ್ಯಾಯವನ್ನು ಸರಿಪಡಿಸುವುದರ ಮೂಲಕ ತೋರಿಸಬೇಕು, ಯಾರು ಅನ್ಯಾಯ ಮಾಡಿದ್ದಾರೆ ಅವರನ್ನು ಎಲ್ಲಿಗೆ ಕಳುಹಿಸಬೇಕೋ ಅಲ್ಲಿಗೆ ಕಳುಹಿಸಿ, ನೀವು ಕೀರ್ತಿಶಾಲಿಗಳಾಗಬೇಕು, ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು, ಇಲ್ಲ ನಾವು ಇರುವುದೇ ಹೀಗೆ ಎಂದರೆ ಹೇಗಾದರೂ ಮಾಡಿಕೊಳ್ಳಿ.

ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಉಪಾಧ್ಯಕ್ಷರೆ, ಅನೇಕ ವಿಚಾರಗಳ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀಮಾನ್ ಮಂಜುರವರು, ಶ್ರೀ ಹನುಮೇಗೌಡರು ಮಾತನಾಡಿದ್ದಾರೆ. ತಮ್ಮ ಮೂಲಕ ನಾನು ಈ ಸದನದ ಹಿರಿಯ ಸದಸ್ಯರು, ಅನುಭವಗಳಾಗಿರತಕ್ಕಂತಹ ಶ್ರೀ ಬಚ್ಚೇಗೌಡರಿಗೆ ಹಾಗೂ ಸ್ವಲ್ಪ ಎಲ್ಲಾ ವಿಚಾರಕ್ಕೂ ದುಡುಕು ದುಡುಕಾಗಿ ಎದ್ದುನಿಂತುಕೊಳ್ಳುವ ಶ್ರೀ ಚೆನ್ನಿಗಪ್ಪರವರಿಗೆ ಒಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಶ್ರೀಮಾನ್ ಬಚ್ಚೇಗೌಡರ ಅನುಭವ ನಮ್ಮೆಗೆಲ್ಲರಿಗಿಂತ ಜಾಸ್ತಿ. ಮಂತ್ರಿಗಳಾಗಿ ಕೆಲಸ ಮಾಡಿದಂಥವರು, ಇದೇ ಖಾತೆಯನ್ನು ನಿರ್ವಹಿಸಿದ್ದೀರಿ. ಎಲ್ಲಾ ರಾಜ್ಯಗಳಿಗೂ ಕೂಡ ಸಂವಿಧಾನದ ನಿರ್ದೇಶನವಿದೆ, ಈ ಹೈನುಗಾರಿಕೆಯಲ್ಲಿ ತೊಡಗಿರುವ ದುರ್ಬಲರಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ಕೆಎಂಎಫ್ ಮೂಲಕ ಆರ್ಥಿಕವಾಗಿ ಸಹಾಯ ಮಾಡಲೆಂದು ಸರ್ಕಾರ ಪ್ರತಿ ವರ್ಷ ಹಣವನ್ನು ಕೊಡುತ್ತದೆ, ಕೊಟ್ಟ ಹಣವನ್ನು ಇವರು ವಿತರಣೆ ಮಾಡಬೇಕಲ್ಲವೆ? ಒಂದು ವರ್ಷ ಆರುಕಾಲು ಕೋಟಿ ರೂಪಾಯಿ ಹಣ ಉಳಿಸುತ್ತಾರೆ, ಇನ್ನೊಂದುಸ ಸಾರಿ, ನಾಲ್ಕು ಕೋಟಿ ಹತ್ತು ಲಕ್ಷ ಅಥವಾ ಐದು ಕೋಟಿ ಹದಿನೈದು ಲಕ್ಷ ಉಳಿಸುತ್ತಾರೆ, ಮಾನ್ಯ ಬಚ್ಚೇಗೌಡರು ಕೂಡ ಮಂತ್ರಿಯಾಗಿದ್ದವರು, ನೀವು ವಿತಕ್ಕೆ ಇದನ್ನು ಸರಿಪಡಿಸಲಿಲ್ಲವೋ ಗೊತ್ತಿಲ್ಲ, ಅವರೇ ಇದನ್ನು ಸರಿಪಡಿಸಬಹುದಾಗಿತ್ತು. ಸರ್ಕಾರ ವಿನು ಉದ್ದೇಶವಿಟ್ಟುಕೊಂಡಿರುತ್ತದೆ ಅಂದರೆ ದುರ್ಬಲ ವರ್ಗಕ್ಕೆ ಅನುಕೂಲವಾಗಲಿ ಎಂದು. Their intention was to defeat the purpose of the government and the direction of the

Constitution. ಅದನ್ನು ನಾವು ಹೇಳಬಾರದೇ ಸ್ವಾಮಿ? ಯಾರು ಅಧ್ಯಕ್ಷರೋ, ಯಾರು ಉಪಾಧ್ಯಕ್ಷರೋ ಎಂಬುದು ಬೇಕಾಗಿಲ್ಲ, ಈ ಸರ್ಕಾರದ ಕಾನೂನಿನ ಅಡಿಯಲ್ಲಿ ರಾಜ್ಯಮಟ್ಟದಲ್ಲಿ ಒಂದು ಸಂಸ್ಥೆ ಕೆಲಸ ಮಾಡುತ್ತಿದೆ, ಇದು ರೈತನಿಗೆ ತೀರ ಹತ್ತಿರವಾಗಿರತಕ್ಕಂಥ ಹಾಗೂ ಅನುಕೂಲಕರವಾಗಿರುವಂಥ ಸಂಸ್ಥೆ, ಇದು ಚೆನ್ನಾಗಿರಬೇಕೆಂದು ನೀವೂ ಕೂಡ ಸಹಮತ ವ್ಯಕ್ತಪಡಿಸುತ್ತೀರಿ. 1987ರಲ್ಲಿ ಸರ್ಕಾರ ತನ್ನ ಷೇರನ್ನು ಕೊಡುತ್ತದೆ, ಮೊನ್ನೆ ಮೊನ್ನೆಯವರೆಗೂ ಕೂಡ ಮೂರು ಕೋಟಿ ರೂಪಾಯಿಗಳನ್ನು ಬೇರೆ ಅಕೌಂಟ್‌ನಲ್ಲಿಟ್ಟುಕೊಂಡು ಷೇರ್‌ಗೆ ಅಡ್ಜೆಸ್ಟ್ ಮಾಡುವುದಿಲ್ಲ, ಆದರೆ ಅದರಿಂದ ಬರುವ ಬಡ್ಡಿಯನ್ನು ಮಾತ್ರ ಸಂಸ್ಥೆಯ ಲಾಭದಲ್ಲಿ ತೋರಿಸಿಕೊಳ್ಳುತ್ತಿದ್ದಾರೆ, ಇದನ್ನು ತಾವು ಒಪ್ಪುತ್ತೀರಾ? ಇನ್ನು ಒಂದು ನಡವಳಿಕೆ ನಡೆದಿದೆ, ತಪ್ಪಾಗಿದ್ದರೆ ನಾನು ತಿದ್ದಿಕೊಳ್ಳಲು ಸಿದ್ದವಾಗಿದ್ದೇನೆ. ಒಂದು ಸಾರಿ ಸಹಕಾರ ಇಲಾಖೆಯಿಂದ ಒಂದು ನಿರ್ದೇಶನ ಹೋಗುತ್ತದೆ. ಅದಕ್ಕೆ ಡೈರೆಕ್ಟರ್ ಮಂಡಳಿಯ ಕಾಮೆಂಟ್ ಏನು ಅಂದರೆ, ಏನ್ರಿ ಅದು ಗೌರ್ನ್‌ಮೆಂಟ್‌ದಾ, ಬಿಸಾಕಿ ಗೌರ್ನ್‌ಮೆಂಟ್‌ದು. ಆದರೆ, ಆ ಸಂಸ್ಥೆ ಸರ್ಕಾರದಡಿಯಲ್ಲಿ ಕೆಲಸ ಮಾಡತ್ತಿದೆಯೇ ಅಥವಾ ಸರ್ಕಾರದಿಂದ ಹೊರತಾಗಿ ತಾನೇ ಸಾರ್ವಭೌಮತ್ವದಿಂದ ಕೆಲಸ ಮಾಡುತ್ತಿದೆಯೇ? ಈ ಸರ್ಕಾರದಿಂದ ಹೋಗುವ ಒಂದು ಆದೇಶಕ್ಕೆ ಇಷ್ಟೊಂದು ತಿರಸ್ಕಾರವೆ? ಕಸದ ಬುಟ್ಟಿಗೆ ಹಾಕ್ರಿ ಯಾವುದು ಅದು ಗೌರ್ನ್‌ಮೆಂಟ್ ಆರ್ಡರ್, ನಮಗೆ ಯಾವುದು ಇದೆ ಗೌರ್ನ್‌ಮೆಂಟ್ ಎಂದು ಹೇಳುತ್ತಾರೆ. ಈ ಸಂಸ್ಥೆಯವರಿಗೆ ಹತ್ತು ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೂ ಸರ್ಕಾರ ಗ್ಯಾರೆಂಟಿಗೆ ನಿಲ್ಲಬೇಕು, ಇದೆಲ್ಲಾ ನಿಮಗೆ ಗೊತ್ತಿರುವ ವಿಚಾರವಾಗಿದೆ. ಇದರ ಬಗ್ಗೆ ನಮ್ಮ ಸರ್ಕಾರ ಯಾವುದೇ ಮೆದು ಧೋರಣೆ ಅನುಸರಿಸುವುದು ಬೇಕಾಗಿಲ್ಲ, ಏನು ತಪ್ಪು ನಡೆದಿದೆ, ಯಾವುದೇ ಕಾಲದಲ್ಲಿ ಆಗಲಿ, ಅದು ಮೂರು ವರ್ಷದಿಂದಲೋ ಅಥವಾ ಹದಿನೈದು ವರ್ಷದಿಂದಲೋ, ಆ ಬಗ್ಗೆ ಅಮೂಲಾಗ್ರವಾಗಿ ವಿಚಾರಣೆ ನಡೆಸಿ ಸತ್ಯ ಹೊರಗೆ ಬರುವಂತೆ ಮಾಡಬೇಕೆಂದು ಈ ಮೂಲಕ ಸಹಕಾರ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಸದಸ್ಯರಾದ ಕೆ.ಬಿ.ಮಲ್ಲಿಕಾರ್ಜುನ್‌ರವರು ಹೇಳಿದ ವಿಚಾರಕ್ಕೆ ನಾನು ಸ್ಪಷ್ಟೀಕರಣ ಕೊಡುತ್ತೇನೆ, ಹಿಂದಿನ ಅಧಿವೇಶನದಲ್ಲಿ ಈ ಸದನದಲ್ಲಿ ನಾವು ಹನ್ನೆರಡು ದಿವಸ ಕುಳಿತುಕೊಂಡೆವು, ಇದೇ ವಿಷಯ ಪ್ರತಿದಿವಸ ಬರುತ್ತಿತ್ತು, ಲ್ಯಾಪ್ಸ್ ಆಗುತ್ತಿತ್ತು. ಆಗ ಲ್ಯಾಪ್ಸ್ ಆಗುತ್ತಿದ್ದದ್ದಕ್ಕೆ ಇವತ್ತು ಮಾನ್ಯ ಅಧ್ಯಕ್ಷರು ಇವತ್ತು ದೊಡ್ಡ ಮನಸ್ಸು ಮಾಡಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗೇ ಗಮನ ಸೆಳೆಯುವ ಸೂಚನೆ ನಿಯಮಾವಳಿ ಪ್ರಕಾರ ಹೀಗೆ ಪ್ರಸ್ತಾಪ ಮಾಡಬೇಕೆಂದು ನಿಯಮಾವಳಿ ಪುಸ್ತಕ ತೋರಿಸಿ ತಾವು ಹೇಳಿದಿರಿ, ಆದರೆ ಹಿಂದೆ ಅದೇ ರೀತಿ ನಡೆದಿದ್ದರೆ ನಾವು ಅದಕ್ಕೆ ಬದ್ಧರಾಗುತ್ತೇವೆ. ನೀವು ಯಾವಾಗಲೂ ಗಮನ ಸೆಳೆಯುವ ಸೂಚನೆಯನ್ನು ತಂದಾಗ ನಾವು ಅಡ್ಡಿ ಮಾಡಿಲ್ಲ, ಮಾತನಾಡುವ ಹಕ್ಕಿಗೆ ಚ್ಯುತಿ ತಂದಿಲ್ಲ, ಇವತ್ತು ಅಂತಹ ಪ್ರಯತ್ನ ಕೆಲವು ಸ್ನೇಹಿತರಿಂದ ಆಗಿದ್ದನ್ನು ನೋಡಿ ನಿಜವಾಗಿಯೂ ವಿಷಾದನೀಯವೆನ್ನಿಸುತ್ತದೆ.

ಇನ್ನೊಂದು ದೃಷ್ಟಾಂತವನ್ನು ಈ ಸದನದ ಗಮನಕ್ಕೆ ತರುತ್ತೇನೆ, ಉದಾಹರಣೆಗೆ ನಾನು ಸಚಿವಸಂಪುಟದ ಸಚಿವ, ಪಶುಸಂಗೋಪನಾ ಇಲಾಖೆಯ ಒಬ್ಬ ರಾಜ್ಯ ಸಚಿವರ ಅಡಿಯಲ್ಲಿರುತ್ತದೆ, ಈ ರಾಜ್ಯ ಮಂತ್ರಿಯಡಿಯಲ್ಲಿರುವ ಪಶುಸಂಗೋಪನಾ ಇಲಾಖೆಯ ಅಧೀನದಲ್ಲಿ ಕೆಲಸ ಮಾಡುವ ಕೆಎಂಎಫ್ ಸಂಸ್ಥೆಗೆ ಸಚಿವಸಂಪುಟದರ್ಜೆಯ ಮಂತ್ರಿ ಅಧ್ಯಕ್ಷನಾಗಿರುತ್ತಾರೆ, ಆ ರೀತಿಯಾಗಲು ಏನು ಉದ್ದೇಶವಿತ್ತು? ಇದನ್ನು ಸದನವೇ ವಿಚಾರ ಮಾಡಲು ಬಿಡುತ್ತೇನೆ, ವಂದನೆಗಳು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆಯಿಂದ ಕೆಎಂಎಫ್‌ನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಎ.ಮಂಜು, ಶ್ರೀ ಹನುಮೇಗೌಡರು, ಶ್ರೀ ಲಿಂಗಪ್ಪನವರು ಹಾಗೂ ರೇವಣ್ಣನವರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈಗಾಗಲೇ ಕಲಂ 64ರ ತನಿಖೆ ಮಾಡಿಸುತ್ತೇನೆಂದು ನಾನು ಉತ್ತರವನ್ನು ಕೊಟ್ಟಿದ್ದೇನೆ, ಆದರೆ ನಂಬಿಕೆ ಇಲ್ಲ, ಸಾಲದ್ದಕ್ಕೆ ಈ ವಿಚಾರವನ್ನೂ ಕೂಡ ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರಾದ ಹನುಮೇಗೌಡರು, ಹಾಸನ ವಿಚಾರದಲ್ಲಿ ತನಿಖೆ ಮಾಡಿದಿರಿ ನಾಲ್ಕು ತಿಂಗಳಾದರು ನೋಟೀಸ್ ಕೊಡಲಾಗದೆ ಆ ವ್ಯಕ್ತಿ ಸಿಗಲಿಲ್ಲವೆಂದು ಹೇಳುತ್ತಿದ್ದೀರಿ, ನೀವೆಲ್ಲಾ ಶಾಮೀಲಾಗಿದ್ದೀರಿ, ಸರ್ಕಾರ ಅವರ ಕೈಗೊಂಬೆಯಾಗಿದೆ ಎಂದು ಸರ್ಕಾರಕ್ಕೆ ಚುಚ್ಚುವ ರೀತಿಯಲ್ಲಿ ಮಾತನಾಡಿದ್ದಾರೆ. ಯಾರಿಗೂ ಸರ್ಕಾರ ರಕ್ಷಣೆ ಕೊಡುವ ಸಂದರ್ಭ ಇಲ್ಲಿ ಇಲ್ಲ. ಮಾನ್ಯ ಸದಸ್ಯರಾದ ಚೆನ್ನಿಗಪ್ಪರಾದಿಯಾಗಿ ಆ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದೂ ಕೂಡ ಪ್ರಸ್ತಾಪ ಮಾಡಿದ್ದಾರೆ, ಕೆಲವು ಸಿಬಿಐ, ಸಿಓಡಿಗೆ ಕೂಡಿ ಎಂದು ಹೇಳಿದರು. ನಮ್ಮಲ್ಲಿರುವ ಅಧಿಕಾರಿಗಳೇ ಎಲ್ಲಾ ಸಿಓಡಿ, ಸಿಬಿಐಗಿಂತ ಉತ್ತಮರಿದ್ದಾರೆನ್ನುವ ನಂಬಿಕೆ ನನಗಿದೆ. ನಮ್ಮ ಇಲಾಖೆಯವತಿಯಿಂದ ಈಗಾಗಲೇ ಸೆಕ್ಷನ್ 64ರಂತೆ ಎನ್‌ಕ್ವೈರಿಗೆ ಆದೇಶ ಮಾಡಿದ್ದೇನೆ. ಶ್ರೀ ಮಂಜುರವರು ಮೆಗಾ ಡೈರಿ ವಿಚಾರವನ್ನು ಪ್ರಸ್ತಾಪ ಮಾಡಿದರು, ಇದು ಬೆಂಗಳೂರು ಮಿಲ್ಕ್ ಯೂನಿಯನ್ ವ್ಯಾಪ್ತಿಗೆ ಬರುತ್ತದೆ, ಅಲ್ಲಿ ಎನ್‌ಡಿಡಿಬಿಯವರು ಕನ್‌ಸ್ಟ್ರಕ್ಷನ್ ಮಾಡಿದ್ದಾರೆ. ಎನ್‌ಡಿಡಿಬಿಯು ಒಂದು ದೊಡ್ಡ ಸಂಸ್ಥೆ, ನಮ್ಮ ಈ ಒಂದು ಹೈನುಗಾರಿಕೆಗೆ ದೊಡ್ಡ ಸಹಾಯ ಮಾಡತಕ್ಕಂಥ ಸಂಸ್ಥೆ. ಅವರು ಮಾಡುತ್ತಿರುವ ಸಂದರ್ಭದಲ್ಲಿ ಚಿದರಕ್ಕೆ ಎಂಬತ್ತೈದು ಸಾವಿರ ರೂಪಾಯಿ ಆಗಿದೆ, ಶೆಡ್ ಚಿದರಕ್ಕೆ ಎಂಬತ್ತು ಸಾವಿರ ರೂಪಾಯಿಗಳಾಗಿದೆ ಎಂಬ ವಿಚಾರವನ್ನು ಅವರು ತಿಳಿಸಿದ್ದಾರೆ. ಈಗ ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಒಂದು ಕಟ್ಟಡ ಕಟ್ಟಬೇಕೆಂದರೆ ಅದು 85 ಸಾವಿರ ರೂಪಾಯಿ ಆಗುತ್ತದೋ ಅಥವಾ 40 ಸಾವಿರ ರೂಪಾಯಿ ಆಗುತ್ತದೋ ಅದನ್ನು ಯಾವ ರೀತಿ ಕ್ಯಾಲಿಕ್ಯುಲೇಟ್ ಮಾಡಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ಇದು ಕೆ.ಎಂ.ಎಫ್.ಗೆ ಸಂಬಂಧಪಟ್ಟ ವಿಚಾರ ಅಲ್ಲ. ಇದು ಪ್ರತ್ಯೇಕವಾಗಿ ಬೆಂಗಳೂರು ಮಿಲ್ಕ್ ಯೂನಿಯನ್‌ಗೆ ಸಂಬಂಧಪಟ್ಟ ವಿಚಾರ. ಇದನ್ನು ನಾನು ಮತ್ತೆ ಪರಿಶೀಲನೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಪೌಚ್ ಫ್ಯಾಕ್ಟರಿ ವಿಚಾರಕ್ಕೆ ಅವರು ಒಂದು ಪ್ರಸ್ತಾವನೆ ಮಾಡಿದರು.

ಎಲ್ಲಾ ರೈತರಿಂದ ಮತ್ತು ಸೊಸೈಟಿ ಯೂನಿಯನ್‌ಗಳಿಂದ ಆ ಪೌಚ್ ಫ್ಯಾಕ್ಟರಿ ಸ್ಥಾಪನೆಯಾಗಿದೆ. ಅದು ಉದ್ಘಾಟನೆ ಆಯಿತು ಮತ್ತು ಸರ್ಕಾರದ ಅನುಮತಿ ಇಲ್ಲದೆ ಅದನ್ನು ಮಾರನೇ ದಿವಸವೇ ಲೀಸ್‌ಗೆ ಕೊಟ್ಟಿದ್ದಾರೆನ್ನುವ ಪಚಾರವನ್ನೂ ಸಹ ಪ್ರಸ್ತಾವನೆ ಮಾಡಿದ್ದಾರೆ. ಇದರ ಬಗ್ಗೆ ಹಿಂದೆ ಯಾರೋ ಮಾನ್ಯ ಸದಸ್ಯರು ಪ್ರಶ್ನೆ ಹಾಕಿದ್ದಾಗ ಅದು ನನ್ನ ಗಮನಕ್ಕೆ ಬಂದಿತ್ತು. ಆ ತರಹ ಆಗಿರುವುದು ನಿಜ ಎಂದು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಯಾವ ರೀತಿ ನಾವು ತನಿಖೆಗೆ ಒಳಪಡಿಸಬೇಕೆಂಬುದನ್ನು ಪಚಾರ ಮಾಡಿ ನಂತರ ತನಿಖೆಯಲ್ಲಿ ಸೇರಿಸಲಿಕ್ಕೆ ನಾನು ಆದೇಶವನ್ನು ಕೊಡುತ್ತೇನೆ. ಅದರ ಮಧ್ಯೆ ಅದಕ್ಕೆ ಒಂದು ಕೋಟಿ 30 ಲಕ್ಷ ರೂಪಾಯಿಗಳ ನಷ್ಟವುಂಟಾಯಿತು. ಅದನ್ನು ಕೆ.ಎಂ.ಎಫ್. ಭರಿಸಿದೆ ಎನ್ನುವ ಪಚಾರವಾಗಿ ಸರ್ಕಾರದ ಗಮನ ಸೆಳೆದಿದ್ದಾರೆ. ಬಹುಶಃ ಅದು ನೋಟಕ್ಕೆ ಸತ್ಯಾಂಶ ಎಂದು ಕಾಣುತ್ತದೆ. ಆದರೆ ಅಗ್ರಿಮೆಂಟ್ ಪಚಾರ ಏನು ಎನ್ನುವುದನ್ನು ನಾನು ಡೀಟೈಲ್ ಆಗಿ ನೋಡಲಿಕ್ಕೆ ಹೋಗಿಲ್ಲ. ಬಹುಶಃ ತನಿಖೆಯಲ್ಲಿ ಅದು ಈಚೆಗೆ ಅದು ಈಚೆಗೆ ಬರುತ್ತದೆಂದು ನಾನು ಭಾಪಿಸುತ್ತೇನೆ. 4.14 ಎಕರೆ ಜಮೀನಿನಲ್ಲಿ ಅರ್ಧ ಎಕರೆ ಜಮೀನನ್ನು ಗುಜರಾತಿನ ಜೆ.ಸಿ.ಸಿ.ಎಂ.ಎಫ್.ರವರಿಗೆ ಸರ್ಕಾರದ ಅನುಮತಿ ಇಲ್ಲದೆ ಕೊಟ್ಟುಬಿಟ್ಟಿದ್ದಾರೆ ಎನ್ನುವ ಪಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಕೆಲವು ಸಂದರ್ಭದಲ್ಲಿ ಕಟ್ಟಡ ಆಗಲಿ, ಜಮೀನು ಆಗಲಿ ಲೀಸ್ ರೂಪದಲ್ಲಿ ಬೇರೆಯವರಿಗೆ ಕೊಡಬೇಕಾದರೆ ಸರ್ಕಾರದ ಅನುಮತಿ ಬೇಕಾಗುತ್ತದೆ. ಆ ಸಂಸ್ಥೆಗೆ ಸರ್ಕಾರದ ಜಮೀನನ್ನು ಸರ್ಕಾರದ ಅನುಮತಿ ಇಲ್ಲದೆ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ. ಆದರೆ ಮಾಹಿತಿ ಏನಿದೆ ಎನ್ನುವುದನ್ನು ನೋಡದೆ ನಾನು ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. ಯಾವುದಾದರೂ ಬೇರೆ ಸಂದರ್ಭದಲ್ಲಿ ಅದನ್ನೂ ಕೂಡ ತನಿಖೆಯಲ್ಲಿ ಸೇರಿಸಲಿಕ್ಕೆ ಹೇಳುತ್ತೇನೆ. ಫಾರಿನ್ ಟೂರ್ ಬಗ್ಗೆ ತಾವು ಹೇಳಿದಿರಿ. ಅಲ್ಲಿ ಸ್ವಿಡ್ಜರ್‌ಲ್ಯಾಂಡ್‌ಗೆ ಹೋಗಿದ್ದರೋ, ಇಸ್ರೇಲ್‌ಗೆ ಹೋಗಿದ್ದರೋ ಆ ಬಗ್ಗೆ ನನ್ನ ಹತ್ತಿರ ಇಲ್ಲಿ ವರದಿ ಇಲ್ಲ. ನನಗೆ ತಿಳಿದುಬಂದಿರುವ ಪ್ರಕಾರ ಸುಮಾರು ಜನರು ಫಾರಿನ್‌ಗೆ ಹೋಗಿದ್ದರಂತೆ. ಅವರು ಏಕೆ ಹೋಗಿದ್ದರು, ಹೋಗಿ ಬಂದ ಮೇಲೆ ಏನಾಯಿತು ಎನ್ನುವುದರ ಬಗ್ಗೆ ನಮ್ಮ ದಾಖಲೆಯಲ್ಲಿ ಇಲ್ಲ. ಅಕಸ್ಮಾತ್ ರಿಪೋರ್ಟ್ ಇಲ್ಲ ಎಂದರೆ ಈಗಲಾದರೂ ರಿಪೋರ್ಟ್‌ನ್ನು ತರಿಸಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇನ್ನು ಎಸ್.ಸಿ: ಎಸ್.ಟಿ. ಪ್ಲಾನ್ ಫಂಡ್‌ನಲ್ಲಿ ಸುಮಾರು 4.16 ಕೋಟಿ ರೂಪಾಯಿಗಳು ಸರಿಯಾದ ರೀತಿಯಲ್ಲಿ ಯುಟಿಲೈಜೇಷನ್ ಆಗಿಲ್ಲವೆಂದು ಗಮನ ಸೆಳೆದಿದ್ದಾರೆ. ಆ ಹಣವನ್ನು ಬ್ಯಾಂಕ್‌ನಲ್ಲಿ ಡಿಪಾಸಿಟ್ ಆಗಿ ಇಟ್ಟುಕೊಂಡಿದ್ದಾರೆ, ಅದರ ಬಡ್ಡಿಯನ್ನು ಇಲ್ಲಿ ಕನ್‌ವರ್ಟ್ ಮಾಡಿಕೊಳ್ಳುತ್ತಿದ್ದಾರೆನ್ನುವ ಪಚಾರದ ಬಗ್ಗೆ ಸಹ ಗಮನ ಸೆಳೆದಿದ್ದಾರೆ. ಬಹುಶಃ ಸರ್ಕಾರ ಎಸ್.ಸಿ/ಎಸ್.ಟಿ. ಯವರುಗಳ ಅಭಿವೃದ್ಧಿಗೆಂದು ಕೊಟ್ಟಂಥ ಹಣವನ್ನು ಯಾರೂ ಅಷ್ಟು ಸಲೀಸಾಗಿ ಇಟ್ಟುಕೊಳ್ಳುವುದಿಲ್ಲ. ಆ ತರಹ ಏನಾದರೂ ಆಗಿದ್ದರೆ ಈ ತನಿಖೆಯಲ್ಲಿಯೇ ಸೇರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇನ್ನು ಮಾನ್ಯ ಹನುಮೇಗೌಡರು ಮಾತನಾಡುತ್ತಾ ನಾಲ್ಕು ತಿಂಗಳಾದರೂ ಸಹ ಇನ್ನೂ ನೋಟೀಸ್

ಕೊಟ್ಟಿಲ್ಲ ಎಂದು ಹೇಳಿದರು. ಕಾರಣವೇನೆಂದರೆ ಅಧಿಕಾರಿಗಳನ್ನು ಕೇಳಿ ಇನ್ನು ಒಂದು ವಾರದೊಳಗೆ, ನಾಳೆ ಸಾಯಂಕಾಲದೊಳಗೆ ಅವರಿಗೆ ನೋಟೀಸ್ ತಲುಪಿಸುತ್ತೇವೆಂದು ಹೇಳಲಿಕ್ಕೆ ತಯಾರಿಲ್ಲ. ಏಕೆಂದರೆ ಅಡ್ರಸ್ ಇಲ್ಲವೋ, ಮನೆ ಚೇಂಜ್ ಮಾಡಿದ್ದಾರೋ ಏನೋ ಎಂಬುದು ಗೊತ್ತಿಲ್ಲ. ಆದಷ್ಟು ಬೇಗ ಆ ನೋಟೀಸನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕವಾದರೂ ಜಾರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈ ಶೇರ್ ಹಣವನ್ನು ಅವರು ಯಾವುದೋ ಬೇರೆಯದಕ್ಕೆ ಉಪಯೋಗಿಸಿದರು. ನಮ್ಮ ಮಾನ್ಯ ಪಶುಸಂಗೋಪನಾ ಸಚಿವರು ಈ ಶೇರ್ ಹಣ ಕೆ.ಎಂ.ಎಫ್.ಗೆ ಹೋಗಬೇಕೆಂದು ಈಗ ಹೊಸದಾಗಿ ಆದೇಶ ಮಾಡಿದ್ದಾರೆ. ಅವರು ಅದನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಾರೋ ಅಥವಾ ಬಿಡುತ್ತಾರೋ, ಅವರು ಒಂದು ಸರ್ಕಾರಕ್ಕಿಂತ ದೊಡ್ಡವರು ಇದ್ದಾರೋ ಚಿಕ್ಕವರು ಇದ್ದಾರೋ ಅದು ಬೇರೆ ವಿಚಾರ. 3,02,59,000 ರೂಪಾಯಿಗಳ ಸರ್ಕಾರದ ಷೇರ್ ಹಣ ಅವರ ಹತ್ತಿರ ಇದೆ. ಆ ಹಣ ಅವರ ಹತ್ತಿರ ಇರುವಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಅವರ ಮೇಲೆ ಎಲ್ಲಾ ತರಹದ ಕಂಟ್ರೋಲ್ ಕೂಡ ಇದೆ. ಆದ್ದರಿಂದ ಯಾವ ಸದಸ್ಯರೂ ಕೂಡ ಆ ಮಂಡಳಿ ಸರ್ಕಾರದ ಕಂಟ್ರೋಲ್‌ನಲ್ಲಿ ಇಲ್ಲವೆಂದು ಗಾಬರಿಯನ್ನು ಮಾಡಿಕೊಳ್ಳಬೇಕಾಗಿಲ್ಲ. ಎನ್‌ಕ್ವಯರಿ ಮಾಡಿಸುವ ವಿಚಾರದಲ್ಲಿ ನನಗೆ ಸಿ.ಒ.ಡಿ. ಬಗ್ಗೆಯಾಗಲೀ ಅಥವಾ ಸಿ.ಬಿ.ಐ. ಬಗ್ಗೆಯಾಗಲೀ ನಂಬಿಕೆ ಇಲ್ಲ. ಈ ನಿಯಮ 64ರ ಅಡಿಯಲ್ಲಿ ಎನ್‌ಕ್ವಾಯರಿ ನಡೆಯುವಂಥದ್ದು ಅದು ಪ್ರತ್ಯೇಕವಾಗಿ ಅದರ ಪಾಡಿಗೆ ನಡೆಯುತ್ತಿರುತ್ತದೆ. ಮೇಲೆ ಹೇಳಿದಂಥ ವ್ಯವಹಾರಗಳ ಬಗ್ಗೆ ಒಬ್ಬ ಚೀಫ್ ಅಡಿಷನಲ್ ಸೆಕ್ರೆಟರಿ ಮಟ್ಟದ ಅಧಿಕಾರಿಗಳ ಕೈಯಲ್ಲಿ ಇನ್ನು ಒಂದು ತಿಂಗಳಲ್ಲಿ ಎನ್‌ಕ್ವಾಯರಿ ಮಾಡಿಸಿ ಆ ರಿಪೋರ್ಟ್ ಬಂದ ಮೇಲೆ ಅದನ್ನು ತಮ್ಮ ಮುಂದೆ ತರುತ್ತೇನೆ. ಇಷ್ಟು ಮಾತ್ರ ಹೇಳಲಿಕ್ಕೆ ಈ ಸಂದರ್ಭದಲ್ಲಿ ನಾನು ಬಯಸುತ್ತೇನೆ.

ಉಪಾಧ್ಯಕ್ಷರು: ಶ್ರೀ ಎ.ರಾಮದಾಸ್ ಮತ್ತು ಶ್ರೀ ಕೆ.ಜಯಪ್ರಕಾಶ್ ಹೆಗ್ಡೆಯವರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ. ಸಮಯದ ಅಭಾವದಿಂದ ಇವತ್ತು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎ.ರಾಮದಾಸ್: ಮಾನ್ಯ ಉಪಾಧ್ಯಕ್ಷರೆ, ಅಧಿವೇಶನ ನಡೆದಂಥ 18 ದಿವಸದಲ್ಲಿ ಇದು ಒಂದೇ ಗಮನ ಸೆಳೆಯುವ ಸೂಚನೆಯನ್ನು ನನ್ನ ಕಡೆಯಿಂದ ಕೊಟ್ಟಿರುವಂಥದ್ದು. ಇಲ್ಲಿ ಒಂದು ಗಮನ ಸೆಳೆಯುವ ಸೂಚನೆಗೆ ಸುಮಾರು ಒಂದೂವರೆ ಗಂಟೆ ಕಾಲ ಚರ್ಚೆ ನಡೆಯಬಹುದು. ನಾನು ಐದು ನಿಮಿಷ ಮಾತನಾಡುತ್ತೇನೆಂದು ಹೇಳಿದರೂ ಇವತ್ತು ಆಗುವುದಿಲ್ಲವೆಂದರೆ ಏನರ್ಥ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಐದು ನಿಮಿಷ ಅವಕಾಶ ಕೊಡಿ. ಅಜೆಂಡಾದಲ್ಲಿ ಮೊದಲು ಇರುವುದಕ್ಕೆ ಪ್ರಾಶಸ್ತ್ಯ

ಕೊಡಿ. ಟೈಮ್ ಇಲ್ಲವೆಂದು ರಿಜೆಕ್ಟ್ ಮಾಡಿದರೆ ಹೇಗೆ? ದಯಮಾಡಿ ಅವಕಾಶ ಮಾಡಿಕೊಡಿ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ವಿಧೇಯಕಗಳು ಇಲ್ಲಿ ಚರ್ಚೆಯಾಗಿ ಪಾಸ್ ಆದ ನಂತರ ಅದನ್ನು ಕೌನ್ಸಿಲ್‌ಗೆ ಕಳುಹಿಸಿ ಅಲ್ಲಿ ಪಾಸಾಗಬೇಕಾಗುತ್ತದೆ. ಅದಕ್ಕೆ ತಾವು ಈಗ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೆ ದಯಪಟ್ಟು ಅವಕಾಶ ಕೊಡಿ. ಗಮನ ಸೆಳೆಯುವ ಸೂಚನೆಯನ್ನು ಚರ್ಚೆಗೆ ನಾಳೆ ತೆಗೆದುಕೊಂಡರೆ ಸರ್ಕಾರದ ಕಡೆಯಿಂದ ನಾಳೆ ಉತ್ತರ ಕೊಡುತ್ತೇವೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಈ ಅಧಿವೇಶನ 31ನೇ ತಾರೀಖಿಗೆ ಅಡ್ಜರ್ನ್ ಆಗಬೇಕಾಗಿತ್ತು. ಅದನ್ನು ಮುಂದುವರಿಸಿರತಕ್ಕಂಥ ಉದ್ದೇಶ ಏನೆಂದರೆ ಸರ್ಕಾರಿ ಕಾರ್ಯಕಲಾಪಗಳು ಆಗಬೇಕು, ಕೆಲವು ಬಹಳ ಜರೂರಾಗಿರತಕ್ಕಂಥ ಮಸೂದೆಗಳು ಈ ಸದನದಲ್ಲಿ ಅಂಕಿತ ಇಲ್ಲಿ ಪಡೆದು ನಂತರ ವಿಧಾನಪರಿಷತ್ತಿನಲ್ಲಿ ಅದಕ್ಕೆ ಅಂಗೀಕಾರದ ಮುದ್ರೆಯನ್ನು ನಾವು ಪಡೆಯಬೇಕಾಗಿರುತ್ತದೆ. ಆದ್ದರಿಂದ ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ ಇವತ್ತು ಇಡೀ ದಿವಸ ಹಲವಾರು ಪ್ರಚಲಿತ ವಿಚಾರಗಳ ಬಗ್ಗೆ ತಾವೆಲ್ಲಾ ಸದನದ ಸಮಯವನ್ನು ಉಪಯೋಗಿಸಿಕೊಂಡಿದ್ದೀರಿ. ಕೊನೆಗೆ ಎರಡು ಗಂಟೆಯಾದರೂ ಕೂಡ ಸರ್ಕಾರಿ ಮಸೂದೆಗಳಿಗೆ ತಾವು ಮನಸ್ಸು ಕೊಡುವುದಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕಾಗುತ್ತದೆ? ನೀವೇ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸರ್ಕಾರದ ಆರು ಮಸೂದೆಗಳು ಪಾಸಾಗಿವೆ. ನಾವು ಸಹಕಾರ ಕೊಡುತ್ತಾ ಬಂದಿದ್ದೇವೆ. ಅದರ ಬಗ್ಗೆ ನಮ್ಮ ಪ್ರಶ್ನೆ ಇಲ್ಲ. ಆದರೆ ತಾವು ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಎಲ್ಲರಿಗೂ ರಿಜೆಕ್ಷನ್ ಹಾಕಿದರೆ ಹೀಗೆ ಆಗುತ್ತದೆ. ಬಹಳ ದಿವಸಗಳ ನಂತರ ಶ್ರೀ ರಾಮದಾಸ್ ಅವರು ಕೊಟ್ಟಿರುವ ಗಮನಸೆಳೆಯುವ ಸೂಚನೆ ಸದನದ ಮುಂದೆ ಬಂದಿದೆ ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಿನ್ನೆ ಅರ್ಧ ದಿವಸ, ಮೊನ್ನೆ ಅರ್ಧ ದಿವಸ ಸರ್ಕಾರಿ ಕಾರ್ಯಕಲಾಪಗಳಿಗೋಸ್ಕರವೇ ಅವಕಾಶ ಮಾಡಿಕೊಟ್ಟಿದ್ದೇವೆ.

ಉಪಾಧ್ಯಕ್ಷರು: ಎರಡು ಗಮನ ಸೆಳೆಯುವ ಸೂಚನೆಗಳು ಇರುವುದರಿಂದ ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಇವತ್ತು ಕೊನೆಯ ಪಕ್ಷ ಎರಡು ಗಂಟೆ ಸಮಯವನ್ನಾದರೂ ಸರ್ಕಾರಿ ಕಾರ್ಯಕಲಾಪಕ್ಕೆ ಅವಕಾಶ ಮಾಡಿಕೊಡಬೇಕು. ದಯಪಟ್ಟು ಎಲ್ಲರೂ ಸಹಕರಿಸಿ.

ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಒಂದು ನಿಮಿಷ ನನಗೆ ಅವಕಾಶ ಕೊಡಬೇಕು. ಇಲ್ಲಿ ಬಹಳಷ್ಟು ವಿಚಾರಗಳು ಚರ್ಚೆ ಆಗುತ್ತಿವೆ. ಈ ಸದನ ಪ್ರಾರಂಭವಾದಾಗಿನಿಂದ 'ನೀರಾ ಇಳಿಸುವುದು ಮತ್ತು ನುಸಿರೋಗದ' ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಿವೇದನೆ ಮಾಡಿಕೊಳ್ಳುತ್ತಲೇ ಇದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಸರ್ಕಾರಿ ಮಸೂದೆಗಳು ಪಾಸಾಗುವಂಥ ಅವಶ್ಯಕತೆ ಕೂಡ ಇದೆ. ಈ ವಿಚಾರದ ಬಗ್ಗೆ ನಾಳೆ ಬೆಳಿಗ್ಗೆ ಚರ್ಚೆಗೆ ತಗೆದುಕೊಳ್ಳೋಣವೆಂದು ಮೊನ್ನೆಯ ದಿವಸವೇ ತಾವು ಹೇಳಿದ್ದಿರಿ. ನಿನ್ನೆ ಚರ್ಚೆಗೆ ತಗೆದುಕೊಳ್ಳಲು ಅವಕಾಶ ಮಾಡಿಕೊಡದಿದ್ದಾಗ ನಾವು ಪ್ರತಿಭಟನೆ ಮಾಡಿದೆವು. ಆ ಸಂದರ್ಭದಲ್ಲಿ ಇವತ್ತು ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದಿರಿ. ಈ ನುಸಿ ರೋಗಕ್ಕೆ ಸರ್ಕಾರದಿಂದ ಪರಿಹಾರ ಕೊಡದಿದ್ದರೂ ಪರವಾಗಿಲ್ಲ. ಕೊನೆಯ ಪಕ್ಷ ಈ ವಿಷಯವನ್ನು ಸದನದ ಮುಂದಿಟ್ಟು ಅದರ ಬಗ್ಗೆ ಚರ್ಚೆಯಾಗುವುದು ಬೇಡವೇ? ಸ್ವಾಮಿ. ತಾವು ಇಷ್ಟು ಹತ್ತಿಕ್ಕಿದರೆ ರೈತರನ್ನು ಕಾಪಾಡುವವರು ಯಾರು? ನೋಡುವವರು ಯಾರು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದು ಬಹಳ ನೋವಿನ ವಿಚಾರ. ಈ ವಿಷಯವನ್ನು ಅಜೆಂಡಾದಲ್ಲಿ ಕೊನೆಯ ಐಟಂ ಆಗಿ ಕಳೆದ ಮೂರು ದಿವಸದಿಂದ ಸದನದ ಮುಂದೆ ಬರುತ್ತಿದೆ. ಎರಡು ದಿವಸದಲ್ಲಿ ಅಧಿವೇಶನ ಮುಕ್ತಾಯವಾಗುತ್ತದೆ. ಈಗಲಾದರೂ ಚರ್ಚೆಗೆ ಅವಕಾಶ ಕೊಡದಿದ್ದರೆ ಪ್ರಯೋಜನವೇನು? ನಮ್ಮನ್ನು ಆರಿಸಿ ಕಳುಹಿಸಿದಂಥ ಜನ ಅಲ್ಲಿ ಕಷ್ಟದಲ್ಲಿ ಇರುವಾಗ ಅವರ ಬಗ್ಗೆ ಈ ಸದನದಲ್ಲಿ ಸ್ಪಂದಿಸಲಿಲ್ಲ ಎಂದು ಹೇಳಿದರೆ ಅದಕ್ಕೆ ಏನು ಅರ್ಥ ಬರುತ್ತದೆ? ದಯಮಾಡಿ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಶಾಸನ ರಚನೆ ಕೂಡ ಅಷ್ಟೇ ಮಹತ್ವ ಆಗಿರುವುದರಿಂದ ತಾವು ಹೇಳಿದ ವಿಚಾರವನ್ನು ನಾಳೆ ತೆಗೆದುಕೊಳ್ಳೋಣ. ಪುನಃ ಅದರ ಬಗ್ಗೆ ಈಗ ಚರ್ಚೆ ಬೇಡ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ನೀರಾ ವಿಚಾರವಾಗಿ ಇವತ್ತು ಐದು ಗಂಟೆಗೆ ಚರ್ಚೆಗೆ ತಗೆದುಕೊಳ್ಳುತ್ತೇವೆಂದು ಮಾನ್ಯ ಸ್ಪೀಕರ್ ಅವರು ಹೇಳಿದ್ದಾರೆ.

ಉಪಾಧ್ಯಕ್ಷರು: ಅವರು ಒಂದ ಮೇಲೆ ನೀರಾ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಾದರೆ ತಗೆದುಕೊಳ್ಳಲಿ. ನನ್ನದೇನೂ ಅಭ್ಯಂತರವಿಲ್ಲ. ಈಗ ಮಸೂದೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.